ರಾಮಾಯಣ ಸಂಗ್ರಹ

ಬಾಲಕಾಂಡವು

ಶ್ರೀರಸ್ತು

ಅರಮನೆಯ ಇಲಾಖಾ

ಮುಜರಾಯಿ ಭಕ್ಷೀರು

ಹೆಚ್. ಲಿಂಗರಾಜೇಅರಸಿನವರಿಂದ

ನೂತನವಾಗಿ ರಚಿಸಲ್ಪಟ್ಟ

ಕರ್ಣಾಟಕ

ರಾಮಾಯಣ ಸಂಗ್ರಹದ

ಬಾಲಕಾಂಡವು

ಮೈಸೂರು

ಆಸ್ಥಾನ ಪಂಡಿತ

ಸಿ. ಆರ್. ಕರಿಬಸವಶಾಸ್ತ್ರಿಗಳಿಂದ

ಪರಿಶೋಧಿಸಲ್ಪಟ್ಟು

ಮೈಸೂರು:

ಶ್ರೀನಿವಾಸ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

1915

ಶ್ರೀರಸ್ತು

ಜನಿಯಿಸಿದವೊದಲಿಂದುವರೆಗಂ ।
ಜನಪ ನಿನ್ನಯು ಜನಕಜನನಿಯು ।
ರನುಪಮುಕೃಪಾಮೃತರಸದಿನೀತನುವು ವರ್ಧಿಸಿತು ॥
ಅನುಸರಿಸಿ ನೀನದನೆ ಯೆನ್ನನು ।
ಘನತರಾದರದಿಂದ ಸಲಹುವೆ ।
ನಿನಗದರಿನೀಕೃತಿಯನರ್ಪಿಪೆ ಮುದದೊಳಭಿಮತಿಸು ॥

Dedicated by kind Permission

To

His Highness Nalmadi

Sri Krishnarajendra Wadier Bahadur, G.C.S.I.

Maharaja of Mysore.

MAY IT PLEASE YOUR HIGHNESS,

Though I am quite aware of the extreme aversion that your Highness feels towards attracting public attention and praise to your exalted self, I yet beg to take advantage of your Highness' winning condescension and generous disposition for dedicating this, my first and humble attempt at authorship, to your Highness.

One of my excuses for taking this liberty is, that I cannot think of any other human being, in whom we find such a happy blending of the great qualities, that make us love the hero of the great Ramayana, which poem I have here attempted to render into simple Verse in

Canarese, capable of being understood even by boys with the most elementary knowledge of Canarese.

Such an admirable living embodiment of all that was great and noble in the Epic Hero cannot fail to form the charactor of my young readers. And in thus giving expression to this conviction, I feel I am only doing my duty, humble as it may be.

I also beg to acknowledge here, that your kind acceptance of this humble dedication is but one of the many acts of benevolence that have been conferred on me and mine by your Highness' illustrious parents and by your Highness, to express my humble gratitude for which, I cannot find words.

I beg to remain,

Your Highness

Your Highness' most obliged & obedient servant,

H. LINGARAJ URS,

ಪೀಠಿಕೆ.

ಮಹಾರಾಜಶ್ರೀ ವಿರಾಜಮಾನರಾದ ಅರಮನೆ ಮರಹಮ್ಮತ್ ಇಲಾಖಾ ಬಕ್ಷಿ ಹೆಚ್. ಲಿಂಗರಾಜೆ ಅರಸಿನವರಿಂದ ರಚಿತವಾದ ಕನ್ನಡ ರಾಮಾಯಣಸಂಗ್ರಹ ಬಾಲಕಾಂಡವೆಂಬ ಷಟ್ಪದೀಕಾವ್ಯವನ್ನು ನಾನು ಮೊದಲಿಂದ ಕೊನೆಯವರೆಗೂ ನೋಡಿದೆನು. ಇದು ೫ ಸಂಧಿಗಳಾಗಿ ಭಾಗಿಸಲ್ಪಟ್ಟದಾಗಿಯೂ, (೧೬೦) ಪದ್ಯಗಳುಳ್ಳದಾಗಿಯೂ ಇದೆ. ಇದು ಕುಮಾರ ವ್ಯಾಸಕವಿಯಿಂದ ರಚಿಸಲ್ಪಟ್ಟ ಕರ್ಣಾಟಕ ಭಾರತದ ಸರಣಿಯನ್ನನುಸರಿಸಿರುವುದಲ್ಲದೆ ಬಹು ಸರಳವಾಗಿಯೂ, ಮಧುರವಾಗಿಯೂ ಇರುವ ಕನ್ನಡ ಮಾತುಗಳಿಂದ ಮತ್ತು ಗಂಭೀರವಾಗಿಯೂ, ಅಪೂರ್ವವಾಗಿಯೂ ಇರುವ ಅಭಿಪ್ರಾಯಗಳಿಂದ ಗರ್ಭಿತವಾಗಿಯೂ, ಪ್ರಾಯಶಃ ಲಕ್ಷಣಬದ್ಧವಾಗಿಯೂ ಇದೆ.

ಕರ್ಣಾಟಭಾಷೆಯಲ್ಲಿ ಸಲ್ಲಕ್ಷಣವಾದ ಕವಿತ್ವವಂ ಮಾಡುವವರಿಗೆ ಕರ್ಣಾಟ ಸಂಸ್ಕೃತಭಾಷೆಗಳೆರಡರಲ್ಲಿಯೂ ಸರಿಯಾದ ಜ್ಞಾನವಿರಬೇಕು. ಅಂತಪ್ಪವರಿಂದ ರಚಿಸಲ್ಪಟ್ಟ ಕನ್ನಡ ಗ್ರಂಥಗಳು ಪಂಡಿತರಿಗೆ ಮಾತ್ರ ಸಂತೋಷಜನಕಗಳಾಗುವುವು. ಆದರೆ, ಈ ಗ್ರಂಥಕರ್ತರು ಸಂಸ್ಕೃತ ಭಾಷೆಯಲ್ಲಿ ವಿಶೇಷ ಪಾಂಡಿತ್ಯವುಳ್ಳವರಲ್ಲದಿದ್ದರೂ ಸಹಜವಾದ ಕವಿತಾ ಸಂಸ್ಕಾರದ ಬಲದಿಂದಲೂ, ಕನ್ನಡಭಾರತ, ಕನ್ನಡಜೈಮಿನಿ ಮುಂತಾದ ಕೆಲವು ಗ್ರಂಥಗಳನ್ನು ಚಿಕ್ಕತನದಿಂದಲೂ ಓದಿದ ಅಭ್ಯಾಸದ ಬಲದಿಂದಲೂ ಮಾಡಿದ ಈಕವಿತೆಯು ಪಂಡಿತರಿಗೂ ಪಾಮರರಿಗೂ ಶ್ರಾವ್ಯವಾಗಿಯೂ ಹೃದ್ಯವಾಗಿಯೂ ಇರುವುದು. ಇದು ದೈವಾನುಗ್ರಹವೇ ಸರಿ. ಹಿಂದೆ ಇವರು ಇದುವರೆಗೂ ಕೆಲವುಸಂದರ್ಭಗಳಲ್ಲಿ ೩೦, ೪೦ ಪದ್ಯಗಳನ್ನು

ರಚಿಸಿರುವರು. ಗಣ್ಯವಾದ ಗ್ರಂಥವನ್ನು ಬರೆಯುವುದಕ್ಕೆ ಇದೇ ಮೊದಲು. ಹೀಗೆಯೇ ಸಾವಿರಾರು ಪದ್ಯಗಳಂ ಮಾಡಿದರೆ ಕವಿತಾರಸವು ಇನ್ನೂ ಒಳ್ಳೆಯ ಪಾಕಕ್ಕೆ ಳಿಯುವುದರಲ್ಲೇನೂ ಸಂಶಯವಿಲ್ಲ.

ಶ್ರೀಮನ್ಮಹಾರಾಜರವರ ೨೮ ನೆಯ ವರ್ಷವರ್ಧಂತಿಯ ಮಹೋತ್ಸವದ ಜ್ಞಾಪನಾರ್ಥವಾಗಿ ಇದನ್ನು ಮಾಡಿ ಒಪ್ಪಿಸಲು, ಇದು ಸಾಮಾನ್ಯಜನರಿಗೂ ಬಾಲಕರಿಗೂ ಸಹ ಓದುವದಕ್ಕೆ ಸರಾಗವಾಗಿರುವುದರಿಂದ ಇದನ್ನು ಅಚ್ಚುಹಾಕಿಸಬೇಕೆಂದು ಮಹಾರಾಜರವರು ಅಪ್ಪಣೆ ಕೊಟ್ಟು ಓದಿಸಿ ಬಹು ಸಂತೋಷದಿಂದ ಅಂಗೀಕರಿಸಿದ್ದಾರೆ

ಈ ಗ್ರಂಥಕರ್ತರು ಮೊದಲು ಬಾಲಕಾಂಡವನ್ನು ಮಾತ್ರ ಮಾಡಬೇಕೆಂಬ ಸಂಕಲ್ಪದಿಂದ ಅಷ್ಟುಮಟ್ಟಿಗೆ ಬರೆದು ಮಂಗಳವಂಮಾಡಿದರು. ಇದನ್ನು ಕೇಳಿದ ಅನೇಕರು ಈ ರೀತಿಯಾಗಿ ರಾಮಾಯಣದ ಷಟ್ಕಾಂಡಗಳನ್ನೂ ಮಾಡಬೇಕೆಂದು ಬಹಳವಾಗಿ ಅಪೇಕ್ಷಿಸಿದುದರಿಂದ ಲೋಕೋಪಕಾರಾರ್ಥವಾಗಿ ಮುಂದಣ ಭಾಗವನ್ನೂ ಬರೆಯುತ್ತಾ, ಪ್ರಕೃತದಲ್ಲಿ ಶ್ರೀಮನ್ಮಹಾರಾಜರವರು ಕೊಟ್ಟ ಪ್ರೋತ್ಸಾಹದ ಕೃತಜ್ಞತೆಗಾಗಿ ಸಿದ್ಧವಾಗಿರುವ ಬಾಲಕಾಂಡವನ್ನು ಮುದ್ರಣಮಾಡಿಸಿದ್ದಾರೆ.

ಈ ಗ್ರಂಥವನ್ನು ಓದಿದ ನಿಷ್ಪಕ್ಷಪಾತಿಗಳಾದ ಗುಣಜ್ಞರು ಸಂತೋಷಪಡುವುದರಿಂದ, ಗ್ರಂಥಕರ್ತರ ಉದ್ದೇಶವು ಸಫಲವಾಗದಿರಲಾರದೆಂದು ನಂಬಿದ್ದೇನೆ.

ಪಿ. ಆರ್. ಕರಿಬಸವಶಾಸ್ತ್ರಿ,

ಮೈಸೂರು. ಕರ್ಣಾಟಕ ಪಂಡಿತ,

17—10—1912. ಮಹಾರಾಜ ಕಾಲೇಜ್.

ಓಂ

ಶ್ರೀಗುರುದಕ್ಷಿಣಾಮೂರ್ತಯೇ ನಮಃ

ಕನ್ನಡ

ರಾಮಾಯಣ ಸಂಗ್ರಹ.

ಬಾಲಕಾಂಡವು.

ಭಾಮಿನೀಷಟ್ಪದಿ

ಶ್ರೀಮದನುಪಮಮಹಿಮ ಗೌರೀ
ಪ್ರೇಮಧಾಮ ವಿರಿಂಚಿಮುಖಸುರ ।
ರಾಮಣೀಯಕ ಮಕುಟಮಣಿ ನೀರಾಜಿತಾಂಘ್ರಿಯುಗ ॥
ಸಾಮಗಾನವಿಲೋಲ ನಿರ್ಜಿತ ।
ಕಾಮ ಸುಗುಣೋದ್ದಾಮ ಸಲಹೈ ।
ಕಾಮಿತವನೊಲಿದಿತ್ತು ಗೋವೆಯಲಿಂಗ ಭವಭಂಗಾ ॥ ೧

ಭಾಳಲೋಚನದುರಿ ಚಡಾಳಿಸೆ ।
ತಾಳಲಾರದೆ ತಾಪವನು ಹಿಮ ।
ಶೈಲತಟವನು ಸಾರ್ದು ಮಂಜಿನ ನಡುವೆ ವಾಸಿಸುತ ।
ವ್ಯಾಳಯೊಳು ಶಶಿಸುರನದಿಗಳಂ ।
ಮೇಳವಿಸಿ ತಳೆದೆಸೆವ ಪರಮುಕ್ತ ।
ಪಾಳು ಗೋವೆಯಲಿಂಗ ಪೊರೆ ಧವಳಾಂಗ ಭವಭಂಗಾ ॥ ೨

ಸಿಂಗರದ ಸಿರದರಮನೆಯೊಳು
ತುಂಗವಾಸವು ನೀರವೆಣ್ಣುರೆ
ಸಂಗಡಿಸಿತೆನಗಾವಗಂ ಕೀಳ್ಗೊಡೆಯೊಳರವು
ಭಂಗವಲ್ಲವೆ ಯೆನುತ ಮುಳಿದುಂ
ಪೊಂಗಿ ಗಿರಿಶನೊಳೆರಕಗೊಳುತಂ
ಪಿಂಗದೊಪ್ಪುವ ಸರ್ವಮಂಗಳೆ ನೀಡೆಮಗೆ ಶುಭವ ॥೩॥

ಹಿಂದಣವತಾರದಲಿ ಪಾರ್ಥಿವ
ವೃಂದವನು ಸಲೆ ಕೊಂದಕತದಿಂ
ದಿಂದು ಸಂದಿಸಿತಿಳೆಗೆ ದನುಜರ ಕಾಟವೆಂಬುದನು
ತಂದು ಚಿತ್ತಕೆ ರಾಮನಾಮದಿ
ಬಂದು ಧರಣಿಯ ಪೊರೆದ ಪರಮಾ
ನಂದನಿಧಿ ಹರಿ ನಮ್ಮ ಸಲಹಲಿ ವಿಮಲಗುಣಲಹರಿ ॥೪॥

ಆವಳೆಲ್ಲಾ ಜಗದ ಮಾತೆಯೊ
ಆವಳಾಪಾಲ್ಗಡಲ ಕುವರಿಯೊ
ಆವಳಖಿಳಕೆ ಚೇತನವನೊಲಿದಿತ್ತು ಕಾಣಿಸುವಳೋ
ಆವಳುತ್ತಮಕಂಠಸೂತ್ರವು
ಭಾವಿಸಲ್ ಶ್ರೀಹರಿಯ ಭಾಗ್ಯವೊ
ಪಾವನೆಯೆನಿಪ್ಪುದಿಲಕ್ಷ್ಮಿಯು ಕುಡುಗೆ ಸಂಪದವ ॥೫॥

ಅಜಮುಖರಿನೋಲಗಿಸಿಕೊಳುತಂ
ಭಜಕರಿಗೆ ನಿರ್ವಿಘ್ನ ವೆಸಗುತೆ ।
ತ್ರಿಜಗದಾನತನಾಗಿ ಸಿದ್ಧಿಗೆ ನೆಲೆವನೆಯೆನಿಪ್ಪ ॥
ಗಜಮುಖನೆ ನೀಂನೀಕೃತಿಯನುರೆ
ಸುಜನರೊಪ್ಪುವ ತೆರದಿನಾಗಿಸಿ ।
ಭುಜಗಭೂಷಣಸುತನೆ ಮಾಡೆನಗಿಂದು ಮಂಗಳವ ॥೬॥

ಪೀಠಿಕಾಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ ॥ ಪುತ್ರಕಾಮೇಷ್ಟಿಯಲಿ ಪಡೆದು ಸು ।
ಪುತ್ರರನು ದಶರಥನು ವಿಶ್ವಾ ।
ಮಿತ್ರನೆಳಸಲು ಕಳುಹಿದನು ಶ್ರೀರಾಮಲಕ್ಷ್ಮಣರ ॥

ಜಗದೊಳಗೆ ಮನುವಿಂದೆ ಪಿಂತಣ ।
ಯುಗದೊಳೊಗೆದರು ಸೂರ್ಯಚಂದ್ರರು ।
ಮಿಗೆಯವರಿನುದಯಿಸಿದುವಿನಶಶಿವಂಶಗಳು ನೋಡೆ ॥
ಸಗರ ಮಾಂಧಾತಾದಿ ಭೂಧವ ।
ರಗಣಿತಗುಣೋಜ್ಜ್ವಲರು ಪಡೆದರು ।
ಬಗೆಗೊಳಪಕೀರ್ತಿಯನು ಸೂರ್ಯಾನ್ವಯದೊಳಗೆ ಪೊಗಳೆ ॥೧॥

ಅವರ ಪಾರಂಪರ್ಯದೊಳು ಭೂ |
ಧವಶಿರೋಮಣಿ ದಶರಥನು ಸಂ |
ಭವಿಸಿ ಕೌಸಲ್ಯೆಯು ಸುಮಿತ್ರೆಯು ಕೈಕೆಯೆಂಬಿವರ |
ಯುವತಿಯರ ಕೈವಿಡಿದು ನಲಿಪಂ |
ವಿವಿಧಭೋಗವನನವರತವನು
ಭವಿಸುತಾತ್ಮಜರಿಲ್ಲದಿರಲಾನೃಪತಿ ಚಿಂತಿಸಿದ ೨

ಮಕ್ಕಳಿಲ್ಲದಸಿರಿಯದೇತಕೆ |
ತಕ್ಕುದೆನಗೀಜರೆ ಯಡಸಿದುದು |
ಅಕ್ಕಟಾ ಸದ್ಗತಿಗೆ ಬಾಹಿರನಾದೆ ನಾನೆನುತ
ಉಕ್ಕುವತಿದುಗುಡದಲಿ ಕನೆಸು
ತ್ರೊಕ್ಕಣಿಸಿದನು ಗುರುವಸಿಷ್ಠನೊ
ಳಕ್ಕುವೀಕೊರಗಣೆಗೆ ಪರಿಹಾರವನು ಬೆಸಸೆಂದು ೩

ಆಳಿದರು ನಮ್ಮನ್ವಯದ ನೃಪ |
ವಾಳಿಗಳು ಮೇದಿನಿಯನಿದ ಸಮ
ಪಾಳಿ ತಮಗಿಲ್ಲೆನಿಸಿ ಸಂತತಿಯೈಸಿರಿಯ ಪಡೆದು
ಹೇಳಲೇನೆನ್ನಲ್ಲಿ ಪಿಂಗಳಗೆ
ಹಾಳುಗೆಡೆದುದು ಮುಂದೆ ತನಗಿ |
ನ್ನೂಳಗವದೇನೆಂದು ಬಿದ್ದನು ಧೊಪ್ಪನಂಘ್ರಿಯಲಿ ೪

ಉತ್ತಮಾಂಗವ ಪಿಡಿದು ಭೂಪನ ।
ನೆತ್ತಿ ನುಡಿದನು ಮುನಿವರನು ಬಿಡು ।
ಚಿತ್ತದನುತಾಪವನು ಬರಿದೇ ಗಾರುಗೊಳವೇಡ ।
ಹೊತ್ತುಗಳೆಯದೆ ಸಕಲವಸ್ತುವ ।
ಒತ್ತಸೇರಿಸು ತಾಳು ದೀಕ್ಷೆಯ ।
ಸುತ್ತವೋತ್ತಮಪುತ್ರಕಾಮೇಷ್ಟಿಯ ಮಖಕ್ಕನುತ ॥೫॥

ಒರೆಯಲೀಪರಿಯರಸನಾಗಳೆ ।
ಪರಿಕರಂಗಳನೆಲ್ಲವೊದಗಿಸಿ ।
ಗುರುವಸಿಷ್ಠನನುಜ್ಞೆಯಿಂದಾ ಸತಿಯರೊಡಗೂಡಿ ।
ಧರಿಸಿದನು ದೀಕ್ಷೆಯನು ಯಾಗಕೆ
ನೆರಹಿದನು ಋತ್ವಿಜರ ವರ್ಗವ
ಸಿರದೆ ಮುದದಿಂ ಪೊಕ್ಕನಂದಧ್ವರದ ಮಂಟಪವ ॥೬॥

ಕ್ರತುವನಾರಂಭಿಸುತ ಹೋಮವ ।
ಸಕಳಗುಣನಾಚರಿಪ ಸಮಯಕೆ ।
ಹುತವಹನು ಮೈದೋರಿ ರಂಜಿಪ ಕನಕಪಾತ್ರೆಯೊಳು ।
ಅತಿಮಧುರಪಾಯಸವ ತಂದಾ ।
ಕ್ಷಿತಿಪತಿಯ ಕೈಗಿತ್ತು ಸಿನ್ನಯ ।
ಸತಿಯರಿಗೆ ಕೊಡು ಗರ್ಭವಾಸುವರೆಸುತ ಮರೆಯಾದ ॥೭॥

ಅರಸನತಿಸಂತೋಷದಾಳುತ
ಕರೆದು ಸತಿಯರಿಗೀಯಲವಸವ ।
ರಿರದೆ ಸವಿಯುಲು ಬಸಿರನೊಂದಿವರೇನದಚ್ಚರಿಯೋ ।
ಮೆರೆವಸತಿಯರ ನೋಡಿ ನಲಿಯು ।
ತ್ತರಿತು ಬಯಕೆಯನೆಲ್ಲ ಸಲಿಸುತ
ತರಳರುದಯವನಿದಿರುನೋಡುತಲಿರ್ದನಾಭೂಪ ।೮।

ದಿನದಿನಕೆ ಬಳೆಯುತಿರೆ ಗರ್ಭವ
ದನುವಿನಿಂ ನವಮಾಸದಂತ್ಯದಿ
ಜನಿಸಿದರು ಸುಕುಮಾರರಂದಾಮೂವರುದರದಲಿ ।
ಜನನಿಯೆಂಬಾನುಡಿಗೆ ಸಂದೆವು
ಜನುಮವೆತ್ತಿದುದಕ್ಕಿದುವೆ ಫಲ
ವಿನಿಯುನಿಷ್ಟವ ಪಡೆದನೆಂದರು ಹಿಗ್ಗುತರಸಿಯರು ।೯।

ಕೋಸಲಾತ್ಮಜೆಯೊಡಲ ಪುಣ್ಯವ
ನೇಸುಪೊಗಳಲು ಸಾಲದಾಜಗ
ದೀಶನನು ನವಮಾಸವರೆಗಂ ಪ್ರೀತ್ಯ ಸಲಹಿದುದು ।
ಶೈಶವಮಾತ್ರ ಸೋಂಕೆ ಪಾಪವ
ನಾಶಪಡಿಸುವ ಹರಿಯ ಚರಣವು
ಬೇಸರಿಸದೊದೆಯುತಿರೆ ಜಠರದ ಭಾಗ್ಯವಿನ್ನೇನೋ ।೧೦।

ಚೈತ್ರಶುದ್ಧದ ನವಮಿಯೊಳು ನ |
ಕ್ಷತ್ರಮೆಸೆಯೆ ಪುನರ್ವಸುವಸುರ |
ಜೈತ್ರಯಾತ್ರೆಗೆ ಪಾಳ್ಗಡಲಿಸಿಂದೇಳ್ದನೆಂಬವೊಲು ||
ಧಾತ್ರಿಗತಿಮುದವೊದವೆ ಸುರರು ವಿ |
ಚಿತ್ರಮೆನೆ ಪೊಗಳುತಿರೆ ಹರಿಯು ಪ |
ವಿತ್ರಕೌಸಲೆಯಸಿರಿನೊಗೆದನು ರಾಮನಾಮದಲಿ ||೧೧||

ಭರತನಾಕೈಕೇಯಿಯುದರದೊ |
ಳರದೊಗೆದನಾಬಳಿಕ ಲಕ್ಷ್ಮಣ |
ನುರುತರದ ಶತ್ರುಘ್ನರಿವರು ಸುಮಿತ್ರೆಯುದರದಲಿ ||
ಪುರದೊಳಗೆ ಪುತ್ರೋತ್ಸವಾರ್ಥಂ |
ನೊರೆವಮಂಗಳವಾದ್ಯರವದ
ಬ್ಬರಣೆ ದೆಸೆಯಾನೆಗಳ ಕಿವಿಯನು ಕಿವುಡುಗೊಳಿಸಿದುದು ||೧೨||

ಧರಣಿಪನ ಸಂತೋಷಜಲಸಿಧಿ |
ಕರೆಯ ಮೀರಿರೆ ಜಾತಕರ್ಮವು |
ಪರಮಸಂಭ್ರಮದಿಂದೆ ನಡೆದುದು ದಾನಧರ್ಮದಲಿ |
ತರಳರಿಗೆ ಸಲೆ ಯೋಗ್ಯಕಾಲವ
ನರಿಯುತನ್ನಪ್ರಾಶನವನಾ
ದರದಿ ಚೌಲೋಪನಯನಂಗಳನಾಗಿಸಿದನರಸ ||೧೩||

ಇಂತು ದಶರಥನೃಪತಿ ಸಂಭ್ರಮ ।
ವಾಂತು ಮಕ್ಕಳ ಬಾಲಲೀಲೆಯ ।
ಸಂತಸದ ಸೊದೆಗಡಲೊಳೋಲಾಡುತ್ತ ಮಿರುತಿರಲು ॥
ಪಂತಕೋಸುಗ ಬ್ರಾಹ್ಮಣತ್ವವ ।
ನಾಂತ ಪ್ರತಿನಿರ್ಮಾಣವಿಧಿ ದಿ ।
ಗ್ದಂತಿ ಮುನಿಗಳೊಳೆನಿಪ ವಿಶ್ವಾಮಿತ್ರನೈತಂದ ॥೧೪॥

ಬಂದಮುನಿಪನ ಕಾಣುತರಸನು ।
ವಂದಿಸುತಲರ್ಘ್ಯಾದಿಪೂಜೆಗ ।
ಳಿಂದ ಸತ್ಕರಿಸುತ್ತ ಕೈಗಳ ಕಟ್ಟಿ ಯಿದಿರಿನಲಿ ।
ನಿಂದು ನಿಮ್ಮಯ ಚರಣದರ್ಶನ ।
ವೊಂದಿದುದರಿಂ ಧನ್ಯನೆನಿಸಿದೆ ।
ನಿಂದು ತನ್ನಿಂದಾವಕಾರ್ಯವು ನಡೆಯಬೇಕೆಂದ ॥೧೫॥

ತಮ್ಮ ಪುಣ್ಯಾಶ್ರಮದಿ ಸಕಲರು ।
ಧರ್ಮವನು ಬಿಡದಾವಗಂ ಸ ।
ತ್ಕರ್ಮಗಳನಾಚರಿಸುತಿರುವರೆ ನೀತಿಮಾರ್ಗದಲಿ ॥
ಸುಮ್ಮನಿರ್ಪುವೆ ದುಷ್ಟಮೃಗಗಳು ।
ಗಮ್ಮನುರುತಪಕಾವಲೋಪವ ।
ದೊಮ್ಮೆಯುಂ ಸಂಭವಿಸದಿಹುದೇ ಬೆಸಸಿರೆಸಗೆಂದ ॥೧೬॥

ರಾಮನಾಡಿದ ನುಡಿಯನಾಲಿಸು ।
ತಾಮುನಿಯು ಪೇಳಿದನು ನೃಪ ನಿ ।
ನ್ನಾಮತದ ಸಾಯಕದ ಬಲಮಿರೆ ಭಯಕೆ ತೆರಪುಂಟೇ ॥
ನ್ಯಾಯನೀತಿಯು ಮೀರಿ ನಡೆಯದೆ ।
ರಾಯಗದ್ದುಗೆಯಲ್ಲಿ ನೀನಿರೆ ।
ತಾಯಗರ್ಭದ ಶಿಶುವಿನಂದದಿ ಸುಖದೊಳಿರುತಿಹೆವು ॥೧೭॥

ವಿನಯಶೌರ್ಯೌದಾರ್ಯಮುಖ ಸ ।
ದ್ಗುಣಗಳಿಂ ಮಾಂಧಾತ ಮೊದಲಾ ।
ದಿನಕುಲದ ಭೂಭುಜರಿಗಿಮ್ಮಡಿ ಕೀರ್ತಿಯನು ಪಡೆದೆ ।
ದನುಜರುಬ್ಬಟೆಗಂಜುತಿಂದ್ರನು ।
ಘನಮಹಿಮನರ್ಥಿಸಲು ನಿನ್ನನು ।
ರಣದೊಳವರನು ತರಿದು ಸಲಹಿದೆ ದೇವಸಂಕುಲವ ॥೧೮॥

ಮೆಚ್ಚಿ ನಿನ್ನಯ ಸಾಹಸಕೆ ತ ।
ನ್ನುಚ್ಚಪೀಠದೊಳರ್ಧವನು ಕೊ ।
ಟ್ಟಪ್ಸರಸಿಯರ ನಿರುಪಮಾನದ ನರ್ತನವ ತೋರಿ ॥
ಮೆಚ್ಚಿಕೆಯ ಗಂಧರ್ವರಿಂ ತವ ।
ಸಚ್ಚರಿತಗಾನವನು ಗೈಸುತ ।
ನಿಚ್ಚಟದ ಸಂತಸವ ನೆಸಗನೆ ನಿನಗೆ ಸುರಪತಿಯು ॥೧೯॥

ಇಂತು ಸದ್ಗುಣವನಧಿ ನೀನಿರ ।
ಲೆಂತು ಘಟಿಸುವುದೆಡರು ತಪಗಳ ।
ಗಂತರಾತ್ಮಧ್ಯಾನಪರರಾಗಿರುತ ವರ್ಧಿಪೆವು ॥
ಕ್ಲಾಂತಿಯೊಂದಿದಮಾಧವನು ವಿ ।
ಶ್ರಾಂತಿಯಾಸೆಯಿನಿಳೆಯ ಭಾರವ ।
ಚಿಂತೆಯಾನದೆ ನಿನ್ನೊಳಿರಿಸಿದನೆನುತಿಹುದು ಲೋಕ ॥ ೨೦ ॥

ಮುನಿಪನಿಂತೆನಲಾಗ ಭೂಪನು ।
ವಿನಯನತನಾಗುತ್ತ ವಚಿಸಿದ ।
ನಿನಿತಕರುಹನೆ ನಾನು ಸಕಲವು ತಮ್ಮನುಗ್ರಹವು ।
ಇನಕುಲೋದಯಕಲ್ಪ ನಿಮ್ಮಾ ।
ಘನಪದಾಂಬುಜವಿತ್ತ ಬಂದುದು ।
ಮನಸಿನಭಿಮತವೇನು ನುಡಿದೊಡೆ ಶಿರದೊಳಾನುವೆನು ॥ ೨೧ ॥

ಕೇಳು ರಘುಕುಲಭೂಮಿಪಾಲಕ ।
ಪ್ರಾಳಯೋಗಿ ವಸಿಷ್ಠಶಿಷ್ಯನೆ ।
ಪೇಳುವೆನು ನಾನಿಲ್ಲಿಗೈದಿದ ಕಾರ್ಯಗೌರವವ ।
ಮೇಲಣಮರರ ತಣಿಪುದಕ್ಕನು ।
ಕೂಲಯಾಗವ ನೊಂದನೆನ್ನ ವಿ ।
ಶಾಲಸಿದ್ಧಾಶ್ರಮದಿ ಗೈಯಲುಪಕ್ರಮಿಸಲದಕೆ ॥ ೨೨ ॥

ಖೂಳರಕ್ಕಸರೆಡರನೆಸಗುತ
ಪಾಳುಗೆಯ್ವರು ವನವನೆಲ್ಲವ
ತಾಳಲಾರದೆ ನಿನ್ನೊಳುಸಿರಲು ಬಂದೆ ನಾನಿಂದು ||
ಭಾಳನಯನನಿಗೆಣೆಯೆನಿಪ ಗುಣ |
ಶಾಲಿ ರಾಮನನೆನ್ನೊಡನೆ ಬಲು |
ದೋಳಸಹ ಲಕ್ಷ್ಮಣನ ಜತೆಯಲಿ ಕಳುಪಿವರ ಕಯ್ಯಿಂ ||೨೩||

ಖಳರಸುವ ತೆಗೆಸುವೆನು ತವಸಿಗ |
ಳುಳಿವು ನಿನ್ನಿಂದಪ್ಪುದಿನ್ನಾಂ |
ತಳುವಲಾಗದು ಮಿತ್ರನಿಳವನು ಪಶ್ಚಿಮಾಂಬುಧಿಗೆ ||
ಎಳೆಯರಿವರನು ಮುದುಪನೊಂದಿಗೆ |
ಕಳುಹಲೇನೋ ಎಂಬ ಚಿಂತೆಯ
ನುಳಿದು ಕಳುಪೈ ನಿನ್ನ ತನುಜರನೆಂದು ಮುನಿ ನುಡಿದ ||೨೪||

ವರಮುನೀಂದ್ರನ ನುಡಿಯ ಕೇಳುತ
ಧರಣಿಪನ ಬಗೆ ಸೂರೆವೋದುದು |
ಮರೆವನುಗೋಪಾಂಗವನು ಬಲುಕಳವಳಂಗೊಂಡು |
ಮರುಳ ಚೇತನವಡೆಯುತಾಕ್ಷಣ
ಹರಹರಾ ನಾನೇನ ಕೇಳವೆ |
ಮರವೆಯೋ ಮೋಹಜ್ವರವೊ ತನಗೆನುತ ಚಿಂತಿಸಿದ ||೨೫||

ಕರಗಿ ಕೊರಗುತ ಮುಗಿದು ಕರಗಳ
ನೊರೆದಸಂದಾನೃಪತಿ ಋಷಿಗಳೆ ।
ತರಳರೆವರನದೇಕೆ ಬಯಸುವಿರಾನು ಜೀವಿಸಿರೆ ।
ಮರೆದಿರೇ ನೀವ್ ಜರೆಯದಡಸುವ ।
ವರೆಗವೀಕ್ಷಿಸಿ ಬಳಿಕ ನಿಮ್ಮಯ
ವರದಿ ಮಕ್ಕಳ ನಾಲ್ವರನು ನಾಂ ಪಡೆದ ಸಂಗತಿಯ ।೨೬॥

ಕಾಲವೊದಗಿತೆ ರಘುಕುಲಾಬ್ಧಿಯ
ಕಾಲುವೆಯ ಜಲಮಿಂಗಿಪೋಪುದ ।
ಕೋಲಗಿಪೆನಿನ್ನಾವದೈವವನೆಂಬ ಜೀಗುದಿಯ ।
ಬೀಳುಕೊಟ್ಟನು ಮುನಿವರೇಣ್ಯರೆ ।
ಮೇಲುವ್ರತಗಳಗೈದು ಮುನ್ನಾಂ ।
ಬಾಲಕರ ವಯಸೀಗನೋಡಲು ವರುಷ ಹದಿನಾಲ್ಕು ॥೨೭॥

ಕ್ರೂರದಾನವರೊಡನೆ ರಣದಲಿ ।
ಹೋರುವುದಕಾನೆಂತು ಕಳುಹಲಿ ।
ಶೂರತನವೆಡೆಗೊಳದ ಬಾಲರ ರಾಮಲಕ್ಷ್ಮಣರ ॥
ಬೀರಲಾಜ್ಞೆಯನೆನಗೆ ಸಾನೇ ।
ಸಾರುತಲ್ಲಿಗೆ ನಿಮ್ಮ ಯಾಗವ
ಪೂರಯಿಪ ಪರಿಯಂತಮಿದ್ದಾ ಬಳಿಕ ಮರಳುವೆನು ॥೨೮॥

ದೀನನಾದೀನೃಪನವೋಲಭಿ
ಮಾನವೇತಕೆ ನಿರ್ವ್ಯಾಳುದಯಿಸ
ದೇನಕೇಳದೊಡದನು ಕೊಡುವೆನು ಪ್ರತ್ಯರೋಮಳಯೆ ||
ಹೀನಭಾಗ್ಯನಿಗೀಸುಪುತ್ರರ
ದಾನವಿತ್ತೀಜಗದಿ ಕೀರ್ತಿಯು
ನಾನು ವೊಡೆ ನಿನಗಿದುವೆ ಸಮಯುವು ಜೇಯ ಗಾಧೇಯ ||೨೯||

ನೃಪತಿಯಾಡಿದ ನುಡಿಯನಾಲಿಸಿ
ಕುಪಿತನಾಗುತ ಯಮಿಶಿರೋಮಣಿ
ಶಪಿಸುವನು ತಾನೆಂಬವೊಲು ತುಟಿಗಳನು ಕಡಿಯುತಲಿ ||
ತಪನಕುಲದಲಿ ನಿನ್ನ ಜನನವು
ವಿಫಲವಾದುದು ನಿನ್ನದೆಸೆಯಿಂ
ದಪಯಶವು ಕಾಲೂರಿ ನಿಂದುದು ವಿಮಲವಂಶದಲಿ ||೩೦||

ದಾನಶೀಲಾಗ್ರಣಿಯೆ ಭಲರೇ
ಏನಕೇಳದೊಡದನು ಕೊಡುವೆಯು
ಸೂನುಗಳ ಕಳುಹೆಂಬ ಯಾಚನೆಗಾಯ್ತು ಮಂಗಳವು ||
ದೀನಯಾಚಕರಿಷ್ಟಸಿದ್ಧಿಗೆ
ಹಾನಿಯಾಗುತ ತೆರಳಲವರ್ಗಳು
ಮಾನಬಹುದೇ ನಿನಗೆ ನಿನ್ನಯ ಪೂರ್ವದರಸರಿಗೆ ||೩೧||

ರಾಮನೆಲೆನೃಪ ನಿನ್ನ ಮಗನೇ ।
ರಾಮನಿಗೆ ನೀಂ ದಿಟದಿ ಜನಕನೆ ।
ಭ್ರಾಮಕವನಿದನಿನ್ನು ಬಿಡಿಸನೆ ಗುರುವಸಿಷ್ಠಮುನಿ ।
ಕಾಮದಿಂ ತುಂಬಿರುವ ನಿನ್ನೀ ।
ತಾಮಸದ ಬುದ್ಧಿಯನು ತಿದ್ದದೊ ।
ಡಾ ಮಹಾಮುನಿಗೆಂತು ಲಭಿಪುದು ಕೀರ್ತಿ ಲೋಕದಲಿ ॥೩೨॥

ನಮ್ಮ ಮಹಿಮೆಯನರಿಯದಗ್ರದ ।
ಹೆಮ್ಮೆಮಾತುಗಳಾಡುತಿರ್ದಪೆ
ನಿಮ್ಮ ಗುರುವನು ಕೇಳು ಬಲ್ಲನು ನಮ್ಮ ಶಕ್ತಿಯನು ॥
ಬ್ರಮ್ಹ ವಿಶ್ವಾಮಿತ್ರ ಮುನಿದೊಡೆ ।
ಬೊಮ್ಮನೇನನು ಮಾಡಬಲ್ಲನು ।
ಸುಮ್ಮನೀಗಳೆ ಸುತರ ಕಳುಹಿಸಿ ಪದುಳವಡೆಯೆಂದ ॥೩೩॥

ಮಟ್ಟುಮೀರಿತು ಮುನಿಯು ಮುನಿಸುರೆ ।
ಕೆಟ್ಟಿತಕಟಾ ಕಾರ್ಯವೆನುತಲಿ ।
ತಟ್ಟನಾಗಳೆ ಗುರುವಸಿಷ್ಠನು ಬಂದನಾಯೆಡೆಗೆ ।
ಗಟ್ಟಿಗರು ಕೌಶಿಕರು ನಿಮ್ಮೊಳ ।
ಗಿಟ್ಟಿಹರು ಘನಕೃಪೆಯನದರಿಂ
ದಟ್ಟಿ ಚರರನು ಬೇಗಕರೆಯಿಸು ರಾಮಲಕ್ಷ್ಮಣರ ॥೩೪॥

ಹರುಷವಾನುತಲಿವರ ಜತೆಯಲಿ
ವರಕುಮಾರರ ಕಳುಹಿದೊಡೆ ನಿನ
ಗುರುತರ ಶ್ರೇಯೋಭಿವೃದ್ಧಿಯು ಸವುನಿಪುದು ಮುಂದೆ ।
ಹರಿಯು ದುಷ್ಟರ ನಿರಿಯಲೋಸುಗ
ನರರ ರೂಪಿಂ ರಾಮನಾಮವ
ಧರಿಸಿ ಧರೆಗವತರಿಸಿ ಮೆರೆವನು ಮಗನೆನಿಸಿ ನಿನಗೆ ॥೩೫॥

ಉರಗರಾಜನೆ ಲಕ್ಷ್ಮಣನು ದಿಟ
ಮರಿತಿರುವರಿದನೀಮುಹಿಮರೆನ ।
ಅರಸನಾಗಳೆ ಕಳುಹಿ ಕರೆಸಿದನಾಕುಮಾರಕರ ॥
ಬರಲು ಮಕ್ಕಳ ಕಾಣುತರಸನು ।
ಕರಗಳಿಂ ಬಾಚುತ್ತ ತೊಡೆಯೊಳ
ಗಿರದೆ ಕುಳ್ಳಿರಿಸುತ್ತ ನುಡಿದನು ಕಾರ್ಯದವಸರವ ॥೩೬॥

ನಂದನರೆ ಕೇಳೀ ಋಷೀಶ್ವರ
ರೊಂದು ಯಾಗಕುಪಕ್ರಮಿಸಲ್ಕೆ
ತಂದು ರಕ್ಕಸರದಕೆ ವಿಘ್ನವನೆಸಗುತಿಹರು ಗಡ ॥
ಇಂದು ನಿಮ್ಮನು ರಕ್ಷಣೆಗೆ ಕಳು
ಹೆಂದು ಕೇಳುವರೆನ್ನ ಸದರಿಂ ।
ಕುಂದದಿವರೊಡನೈದಿ ಬಿಡಿಸಿರಿ ದನುಜಭೀತಿಯನು ॥೩೭॥

ಮೆಚ್ಚಿ ಸುತ ಮುನಿವರರನಾವಗ |
ಎಚ್ಚರಿಕೆಗೂಡಿಹುದು ಮಕ್ಕಳೆ |
ಕೆಚ್ಚೆದೆಯ ಕೇಡಿಗರು ಮಾಯಾವಿಗಳು ರಾಕ್ಷಸರು
ಮುಚ್ಚು ಮರೆಯಿಂದೈದೆ ಬೀಳ್ವರು |
ಅಚ್ಚು ಮೆಚ್ಚಿಸೆ ವೇಷದಾಳ್ವರು |
ನೆಚ್ಚಲಾಗದು ಖಳರ ತರಿವುದು ಜಾಣತನದಿಂದ || ೩೮ ||

ಎನುತ ವಿಶ್ವಾಮಿತ್ರಮುನಿಗಳ |
ಘನಪದಾಂಬುಜಕವರನೆರಗಿಸಿ |
ವಿನಯಹೀನನ ಕ್ಷಮಿಸಿ ಮಕ್ಕಳ ಕಾಯಬೇಕೆನುತೆ |
ತನಯರಿರ್ವರನವರ ಹಸ್ತಕೆ |
ಜನಪನೀಯುತ ನಮಿಸಲಾಗಳು |
ಮುನಿಕುಲಾಗ್ರಣಿ ಪರಸಿ ಪಡೆದು ವಸಿಷ್ಠನನುಮತಿಯ || ೩೯ ||

ತೆರಳುತಿರಲಾ ರಾಮಲಕ್ಷ್ಮಣ |
ರೆರಗಿದರು ಗುರುಪಿತರ ಚರಣಕೆ |
ಮರಳಿ ತಕ್ಕೈಸಿದನು ದಶರಥನಾತ್ಮಜರನೊಲಿದು |
ತರಣಿವಂಶಲಲಾಮ ರಾಮನೆ |
ತರಳಲಕ್ಷ್ಮಣನೊಡನೆ ಸೌಖ್ಯದಿ
ಪೊರೆದು ಮಖವನು ಮರಳು ನಗರಿಗೆನುತ್ತ ಹರಸಿದನು || ೪೦ ||

ಎರಡನೆಯ ಸಂಧಿ ಸಂಪೂರ್ಣಂ

ಮೂರನೆಯ ಸಂಧಿ.

ಸೂ॥ ವರಮುನಿಪನಿಂದಸ್ತ್ರವಿದ್ಯಾ ||
ಪರಿಣತಿಯನಾ ರಾಮಲಕ್ಷ್ಮಣರು |
ಧರಿಸಿ ದನುಜರ ಮುರಿದು ಕಾಯ್ದರು ಮುನಿಯ ಯಾಗವನು ||

ಬಲಗಡೆಯೊಳಾ ರಾಮನೆಡದಲಿ
ಯಲಘುಮತಿ ಲಕ್ಷ್ಮಣನು ಮಧ್ಯದಿ |
ಚಲದ ಗರುಡಿಯುಪಾಧ್ಯವಿಶ್ವಾಮಿತ್ರನೈದಿದನು |
ಹಲವುದೂರವ ನಡೆದು ಬರುತಿರೆ |
ಜಲಜಮಿತ್ರನು ಪಶ್ಚಿಮಾಂಬುಧಿ |
ಗಿಳಿವಸಮಯಕೆ ಕಂಡರವರಾಜಾಹ್ನವೀನದಿಯ ||೧||

ಜಲದಿ ಸಂಧ್ಯಾವಂದನೆಯ ಬಲು |
ನಲವಿನಿಂ ಗೆಯ್ಯುತ್ತಲಾಗಳೆ |
ಒಲಿದರಾತ್ರಿಯನಲ್ಲಿ ಕಳೆಯಲುಗುರುವಿನಾಜ್ಞೆಯಲಿ |
ಬಳಯುತರು ತಿರಿತಂದು ತಳಿರನು |
ನೆಲದಿ ಹಾಸುತೆ ಮೆಲ್ಲನಲ್ಲಿಯೆ |
ಮಲಗಿ ಸುಖದಿಂ ನಿದ್ದೆಗೈದರು ಮುನಿಪತಿಯ ಸಹಿತ ||೨||

ನಿದ್ದೆ ಮುಗಿಯಲು ಮಧ್ಯರಾತ್ರಿಯೊ
ಳೆದ್ದು ರಾಮನು ಮುನಿವರೇಣ್ಯರೆ
ಬುದ್ಧಿಗಲಿಸುವುದೆನಗೆ ಸದಿಯಿದರಿರವ ನಿರವಿಸುತ
ಬದ್ಧಮೆಂತೀಗಂಗೆ ತನ್ನೊಳ
ಗದ್ದಿದರ ದುರಿತವನು ಕಳೆವಳು
ಹೊದ್ದಿತಿವಳಗದೆಂತು ಭಾಗೀರಥಿಯೆನಿಪ ಪೆಸರು ||೩||

ಕೇಳಲೀಪರಿಯಿಂದೆ ಮುನಿಪತಿ
ಹೇಳತೊಡಗಿದನಾಗ ರಾಮಗೆ
ಕೇಳು ಹೇಳುವೆನಿದರ ಮಹಿಮೆಯ ಪೂರ್ವಚರಿತೆಯನು
ತೋಳ ಬಲದಿಂ ದ್ವೀಪಸಪ್ತಕ
ವಾಳುತಿರ್ದನು ಸಗರಧರಣೀ
ಪಾಲಕನು ನಿಮ್ಮನ್ವಯದ ನೃಪಸಾರ್ವಭೌಮನಲಾ ||೪||

ಈತ ಪತ್ನೀದ್ವಯಸಮೇತನು
ನೀತಿಯುತ ಬಹು ಧರ್ಮನಿಷ್ಠನ
ಭೀತನೊರ್ವನು ಮೊದಲ ಪತ್ನಿಯೊಳೊಗೆದನಸಮಂಜ
ಮಾತೆಯೆನಿಸಿದಳಾ ಕನಿಷ್ಠೆಯು
ಖ್ಯಾತಿವೆತ್ತರುವತ್ತುಸಾಸಿರ
ಜಾತರಿಗೆ ಬಹುಪುತ್ರನೆನಿಸಿದನಂದು ಭೂಪತಿಯು ||೫||

ಅರಸನಾಗ ಶತಾಶ್ವಮೇಧವ ।
ವಿರಚಿಸಲು ನಿಶ್ಚೈಸುತೆಲ್ಲವ ।
ಪರಮವೈಭವದಿಂದ ಮಾಡಿದನೊಂದು ಶುಭಮುಹೂರ್ತದಿ ॥
ಧರಿಸಿ ದೀಕ್ಷೆಯನದಕೆ ಪುತ್ರರ ।
ಕರೆದು ಕಳುಹಿದನಶ್ವರಕ್ಷಣೆ ।
ಕಿರದೆ ತನ್ನಿಚ್ಛೆಯಲಿ ತಿರುಗುತಲಿರ್ದುದಾ ಹಯವು ॥೬॥

ತನ್ನ ಪದವಿಗೆ ಲೋಪವಪ್ಪುದು ।
ಮನ್ನಿಸುವ್ರೊಡಿದನೆನುತ ಸುರಪತಿ ।
ಸನ್ನುತಾಶ್ವವನೆಳೆದು ಮಾಯೆಯಿನರಿಯದಂದದಲಿ ॥
ಪನ್ನಗೇಂದ್ರನ ಲೋಕದಲಿ ಸಂ ।
ಪನ್ನತಪದೊಳಗಿಪ್ಪ ಕಪಿಲನ ।
ಬೆನ್ನ ದೆಸೆಯಲಿ ಕಟ್ಟಿ ಜಾರಿದನಾಗ ಸುರಪುರಿಗೆ ॥೭॥

ಸಗರಪುತ್ರರು ಕಾಣದಶ್ವವ ।
ನೊಗುಮಿಗೆಯ ಕೋಪವನು ತಾಳುತ ।
ಜಗವನೆಲ್ಲವ ಸುತ್ತಿ ಕಾಣದೆ ತೊಳಲಿ ಬಳಲುತ್ತ ॥
ಬಗೆಬಗೆಯ ಸಾಹಸದಿ ಭೂಮಿಯ ।
ನಗೆದು ಪಾತಾಳದೊಳು ಕಂಡರು ।
ವಿಗಡತಪಸಿಯು ಬೆಂಗಡೆಯೊಳಹ ಯಜ್ಞತುರಗವನು ॥೮॥

ಏನಿದೆಲವೋ ಕಪಟ ನಿನ್ನೀ ।
ಮೌನದಾಡಂಬರವ ಸುಡುಸುಡು ।
ಮಾನಹೀನನೆ ತುರಗಚೋರನೆ ಯೆನುತಲಬ್ಬರಿಸೆ
ಧ್ಯಾನವಾರಿತು ಮೌನವೋಡಿತು ।
ಜ್ಞಾನನಿಧಿ ಕಂಗಳನು ಬಿಡಲಾ ।
ಮಾನವೇಂದ್ರಾತ್ಮಜರು ಬೇಯುತ ಭಸ್ಮವೆನಿಸಿದರು ।೯।

ಅರಿಯುತಿದನಾ ಅಂಶುಮಂತನು ।
ಹಿರಿಯಪುತ್ರನ ಸುತನು ಚೊಕ್ಕನು ।
ಮೆರೆವ ಪಾತಾಳವನು ಕಂಡನು ಕಪಿಲಮುನಿವರನ
ಪರಿಪರಿಯ ನುತಿಯಿಂದೆ ಮೆಚ್ಚಿಸಿ ।
ತುರಗವನು ಪಡೆಯುತ್ತೆ ತಾತನ ।
ವರಮಖವ ಪೂರೈಸಿ ಕೀರ್ತಿಯನೊಂದಿದನು ಜಗದಿ ।೧೦।

ಸುತಪರಂಪರೆಯಿಂದ ಮೊಗೆದ
ಪ್ರತಿಮನೆನಿಪ ಭಗೀರಥಾವನಿ ।
ಪತಿ ಪಿತರ ದುರ್ಗತಿಯ ಕೇಳುತ ತಾಳಿ ಮರುಗುತವನು ।
ಗತಿವಿಹೀನರೆ ತನ್ನವರು ಸ ।
ದ್ಗತಿಗೆ ಕಳುಹುವೆನವರ ನೆನುತು ।
ನ್ನತವಿಮಲಮತಿ ಪೊಕ್ಕನಾ ಪಾತಾಳಲೋಕವನು ।೧೧।

ಯತಿಯು ಸೇವಿಸುತವನನುಗ್ರಹ |
ದತಿಶಯವನುರೆ ಪಡೆದು ಪಿತೃಸ |
ದ್ಗತಿಗೆ ಹಾದಿಯು ತೋರಿಸೆನುತಲಿ ಬಿದ್ದನಂಘ್ರಿಯಲಿ |
ಕ್ಷಿತಿಪ ಲಾಲಿಸು ಪೋಗಿ ಸಗ್ಗಕೆ |
ಪತಿತಪಾವನೆಯೆನಿಪ ಗಂಗೆಯು |
ನುತಿಸಿ ಕರೆತಂದವರ ಬೂದಿಯುಮೇಲೆ ಹರಿಸುವುದು | ೧೨ ||

ಇಂತು ಗೈಯಲು ನಿನ್ನ ಪಿತೃಗಳ
ನಂತರದಿ ಸದ್ಗತಿಯ ಪಡೆವರ |
ನಂತವಾಗಿಹ ಕೀರ್ತಿಯೊಂದುವೆ ನೀನು ಲೋಕದಲಿ ||
ಚಿಂತೆಬೇಡೆಲೆನೃಪತಿ ನೀನ |
ಶ್ರಾಂತಸಾಹಸಯುತನು ಮಿಕ್ಕರಿ |
ಗೆಂತು ಸಾಧ್ಯವು ಕಜ್ಜವಿದು ತಾನೆಂದು ಮುನಿ ನುಡಿಯೆ | ೧೩ |

ಐಸಲೇ ಯೋಗೀಶ ತಮ್ಮಯ
ದಾಸನಿಗೆ ತನಗೇನು ದೊಡ್ಡಿತು |
ಸಾಸದಿಂದಾಕೆಯನು ತರುವೆನೆನುತ್ತಲಾ ನೃಪನು |
ಆ ಸುರೇಂದ್ರನ ನಗರಿಗೈದಿ ವಿ |
ಭಾಸಿಗಂಗೆಯ ನರ್ಥಿಸಲು ನಿ |
ನ್ನಾಸೆಯರಿತೆನು ಮಗನೆ ಯೈತಹೆನೆಂದಳಾ ಗಂಗೆ | ೧೪ |

ಮೊರೆದು ಘೂರ್ಣಿಸುತಖಿಲಲೋಕವ ।
ನರರೆ ಮುಳುಗಿಪಳೆಂಬತೆರದಲಿ
ವರಭಗೀರಥನೊಡನೆ ಬರುತಿರೆ ಧರಣಿಗನಿತರಲಿ ।
ಮೆರೆವಕೈಲಾಸದಲಿ ಗೌರೀ ।
ವರನು ಕೇಳುತ ರವವ ಜಡೆಯೊಳ ।
ಗಿರದೆ ಧರಿಸಲ್ಕದನು ಕಾಣುತ ನೃಪತಿ ಚಿಂತಿಸಿದ ॥೧೫॥

ಹರನೆ ಗೌರೀವರನೆ ಪಾಲಿಸು ।
ಪುರಹರನೆ ಶಂಕರನೆ ರಕ್ಷಿಸು ।
ತರಳೆಯರಿಯದೆ ಗೈದತಪ್ಪನು ಕರುಣಿ ನೀಂ ಕ್ಷಮಿಸು ।
ಉರಿದು ಬಿದ್ದಿಹನಮ್ಮ ಪಿತೃಗಳ ।
ಪರಮಸದ್ಗತಿಗಾಗಿ ಬೇಡಲು ।
ಪರರನೋವನು ತನ್ನದೆನುತಲಿ ತಿಳಿದು ಬಂದಿಹಳು ॥೧೬॥

ಲೋಕಮಾತೆಯು ಧರೆಯ ಜೀವರ
ಸಾಕುವಾಸೆಯೊಳಿಂದು ಬಂದಿಹ ।
ಳೀಕೆಯಿಂ ಮತ್ಪಿತೃಗಳೆಲ್ಲರು ಧನ್ಯರಾಗುವರು ।
ಲೋಕನಾಯಕ ಶಿಕ್ಷೆ ರಕ್ಷೆಯ
ಚಾಕಚಕ್ಯದೊಳಾರು ನೀನುಳಿ ।
ದೇಕೆ ಸೆರೆಹಿಡಿದಿರ್ಪೆ ಗಂಗೆಯ ಕಳುಹಿ ಸಲಹೆಂದ ॥೧೭॥

ಭಕ್ತವತ್ಸಲನಾಲಿಸುತ ನೃಪ |
ನುಕ್ತಿಯನು ಮನದೊಳಗೆ ಮೆಚ್ಚುತ |
ಯುಕ್ತಮೆಂದಾಗಂಗೆಯೊಳು ಕಲೆಯೊಂದನೇಬಿಡಲು ||
ವ್ಯಕ್ತಮಾದಾಕಳೆಯು ಸಪ್ತ |
ವ್ಯಕ್ತಿಗಳನಾಂತೆಸೆದುದದರೊಳು |
ಭುಕ್ತಿಮುಕ್ತಿದವೊಂದುಭಾಗವು ಪರಿದುದವನೊಡನೆ ||೧೮||

ಘನಮಹಿಮನಾಜಹ್ನುಋಷಿ ಮ |
ತ್ತಿನಮುನಿಗಳನು ನೆರಹಿ ಯಾಗವ
ನನುವಿನಿಂ ಗೈಯುತ್ತಮಿರ್ಪಸಮಯಕಾ ಬಳಿಗೆ ||
ವಿನುತಗಂಗೆಯು ಬರಲು ಮುಳಿಸಿಂ
ಮುನಿಪನಾಪೋಶನವನೆಸಗಲು |
ಜನಪನೊದಗಿತೆ ಮರಳಿ ವಿಷ್ಣುವೆನುತ್ತ ಚಿಂತಿಸಿದ ||೧೯||

ಹಲವುದಿನವಾತನನು ಸೇವಿಸು |
ತಲಘುತರಭಕ್ತಿಯಲಿ ನುತಿಸ |
ಲ್ಕೊಲಿದು ತನ್ನಯ ಕರ್ಣಬಿಲದಿಂ ಬಿಟ್ಟನೀಕೆಯನು ||
ಬಳಿಕ ಜಾಹ್ನವಿಯೆಂಬಪೆಸರಾ |
ಯ್ತಿಳೆಯೊಳೀಕೆಗೆ ಮುಂದೆ ನಡೆಯು |
ತ್ತಿಳದು ಪಾತಾಳಕ್ಕೆ ಬೂದಿಯನಾಗ ನನೆಸಿದಳು ||೨೦||

ಗತಿಗೆ ಸಂದರು ಸಗರಪುತ್ರರು
ಮತಿಯುತಭಗೀರಥನು ಗಂಗೆಯ
ಪೃಥಿವಿಗಿಳಿಸಲು ಬಂದುದಾಭಾಗೀರಥೀನಾಮ ।
ಕ್ಷಿತಿಯೊಳೀಕಥೆಗೇಳ್ವವರು ದು
ಷ್ಕೃತವಳಿದು ಪರಮುಕ್ತಿಯೈದುವ ॥
ರತಿದರಿದ್ರರು ಭಾಗ್ಯಶಾಲಿಗಳಾಗಿ ಬಾಳುವರು ॥ ೨೧ ॥

ಸಗರಭೂವಿಶ್ವರರ ತನುಭವ ।
ರಗೆದಕತದಿಂ ಕಡಲಿಗಾದುದು ।
ಬಗೆಯೆ ಸಾಗರವೆಂಬಪೆಸರೆಂದೆನುತ ಮುನಿ ನುಡಿಯೆ
ಬಗುಮಿಗೆಯು ಸಂತಸದಿ ರಾಮನು
ಮುಗಿಸಿ ರಾತ್ರಿಯ ಮರುದಿವಸದೊಳ ।
ಗೊಗೆಯೆ ದಿನಮಣಿ ಮಿಂದು ಸಂಧ್ಯಾದಿಗಳ ನೆಸಗಿದನು ॥ ೨೨ ॥

ಕರೆಯುತುಪದೇಶಿಸಿದನಾಮುನಿ ।
ಮೆನೆವಬಲವತಿ ಬಲವೆನಿಪ್ಪ ।
ಎರಡು ವಿದ್ಯೆಗಳನು ನೃಪಾತ್ಮಜರಿರ್ವರಿಗೆ ಮುದದಿ
ತರತರದಿನಾಬ್ರಾಹ್ಮಮೊದಲಾ
ಮರುತರಾಸ್ತ್ರಂಗಳ ಸುಮಂತ್ರೋ
ಚ್ಚರಣೆಯನು ಕಲಿಸುತ್ತಮಿತ್ರನಮೂಲ್ಯವಹ ಧನುವ ॥ ೨೩ ॥

ಬಳಿಕ ಬಾಲಕರೊಡನೆ ತೆರಳುತ ।
ನಲಿದು ಹಿಗ್ಗುತ ಹಜ್ಜೆಹಜ್ಜೆಗೆ ।
ಚೆಲುವರನು ನೋಡುತ್ತ ಮೆಚ್ಚುತಲಂತರಂಗದಲಿ ॥
ಸಲೆ ಕೃತಾರ್ಥನು ತಾನು ಮಿಕ್ಕರಿ ।
ಗಳವೆ ರಾಮಸಮಾಗಮವು ಬಹು ।
ಫಲವನೊಂದಿತು ಮನದಭೀಷ್ಟವಿದೆನುತ ಮುನಿ ನಡೆದ ॥೨೪॥

ಪೋಗುತಿರಲಿಂತವರಡವಿಯೊಳು ।
ಬೇಗಬಂದಳದೋರ್ವದನುಜೆಯು ।
ಕೂಗುವಮಾರಿಯತೆರದಿನರಿಚುತ ಬಲುವಿಕಾರದಲಿ ॥
ಆಗ ವಿಶ್ವಾಮಿತ್ರನೆಂದನು ।
ರಾಘುವನೆ ನೋಡಿವಳೆ ತಾಟಕಿ ।
ತಾಗೆ ಶಾಪವು ಘೋರರಾಕ್ಷಸಿಯಾಗಿ ಚರಿಸುವಳು ॥೨೫॥

ಈಕೆ ಮಾತೆ ಸುಬಾಹುಮಾರೀ ।
ಚಾಕರಾಳಖಳಗೆರ್ಗ ಸಜ್ಜನ ।
ಶೋಕದಾಯಿನಿ ಲೋಕಕಂಟಕಿ ಘೋರಪಾತಕಿಯು ॥
ಜೋಕೆಯಿಂದಿಡು ಸರಳನೆನೆ ಲೋ ।
ಕೈಕವೀರನಲಾ ರಘುಜನಾ ।
ಭೀಕರಾಕಾರೆಯನು ಯಮಪುರಿಪುಗಿಸಿದನು ಜವದಿ ॥೨೬॥

ನೋಡಿದನು ಬಗೆ ಮೆಚ್ಚಿ ಮುನಿ ಕೊಂ
ಡಾಡಿದನು ರಘುವರನ ಶೌರ್ಯವ
ನಾಡಿಗಚ್ಚರಿಯೆನುತ ನಡೆದನು ಮುಂದೆ ದಾರಿಯನು
ನಾಡೆ ಹರುಸದಿ ರಘುಜರಿಂದೊಡ
ಗೂಡುತೀಪರಿ ಕೆಲವುದಿನಕೆ ಸ
ಗಾಧನೈತಂದಮಲ ಸಿದ್ಧಾಶ್ರಮವಸೇರಿದನು ॥ ೨೩ ॥

ಬಂದು ಕಂಡುದು ನಿಖಿಳತಾಪಸ
ವೃಂದವಾ ಮುನಿಪುಂಗವನ ನಾ
ನಂದಗೊಂಡಿತು ಭಯನಿವಾರಣವಾಯ್ತು ತಮಗೆನುತ
ಅಂದು ಕೌಶಿಕಮುನಿಯು ಋತ್ವಿಜ
ರಿಂದ ಕೂಡುತ ಯಾಗದೀಕ್ಷೆಯ
ನಂದದಿಂ ವಹಿಸುತ್ತ ಯಜ್ಞಾರಂಭಕನುವಾದ ೨೪

ಇಂತು ಯಾಗವ ನೆಸಗುತಿರೆ ನಿ
ಶ್ಚಿಂತೆಯಿಂ ಮುನಿಸಾರ್ವಭೌಮನು
ಅಂತಕೋಪಮರೆನಿಸಿ ಚರಿಪ ಸುಬಾಹುಮಾರೀಚರ್
ಪಿಂತೆ ಮಾತೆಯು ಕೊಲಿಸಿದೀತನ
ದೆಂತು ಯಾಗವ ಪೂರ್ತಿಗೊಳಿಪನು
ಕಂತುಹರನಾ ದಕ್ಷಯಾಗವನಾಗ ಗೊಡಿಸಿದನೆ ೨೫

ಇಂದು ಯಾಗವ ಕೆಡಿಸುತಿವನನು ।
ತಿಂದು ತೇಗುವೆವೆಂದು ಖಳರೈ ।
ತಂದು ಕುಂಡದ ಬಳಿಯನೈದಲು ಮುನಿಪನಾಜ್ಞೆಯಲಿ ॥
ಅಂದು ರಾಮನು ಸರಳನೊಂದಿಡೆ ।
ಕುಂದಿ ಕೆಡೆದು ಸುಬಾಹು ಮಡಿದನ ।
ದೊಂದುಬಾಣದಿ ತೂರಿ ಕಡಲೊಳು ಬಿದ್ದ ಮಾರೀಚ ॥ ೩೦॥

ಹರುಷರಸವಾಶ್ರಮದಿ ಪಸರಿಸಿ ।
ತಿರದೆ ಬಂದರು ಸಕಲಮುನಿಗಳು ।
ಹರಸಿದರು ರಘುರಾಮ ಶುಭತತಿಗೊಡೆಯನಾಗೆನುತ ॥
ಹರುಗಿದುದು ವರಮಖವು ಸುರರಿಗೆ ।
ಪರಮತೃಪ್ತಿಯದಾಯ್ತು ನಿನ್ನಯ
ಬರವು ಘನಸಂಪದವು ನಮಗಿಂದೆಂದು ಮುನಿನುಡಿದ ॥ ೩೧॥

ಮೂರನೆಯಸಂಧಿ ಸಂಪೂರ್ಣಂ.

ನಾಲ್ಕನೆಯ ಸಂಧಿ.

ಸೂ || ಅತಿಮಹಿಮರಾಘವನು ಗೌತಮ |
ಸತಿಯ ಶಾಪವ ಕಳೆದು ಶಂಕರ |
ನತುಳಚಾಪವ ಮುರಿದು ವರಿಸಿದನಂದು ಭೂಮಿಜೆಯ ||

ಫಲಿಸಿದುದು ತನ್ನೀಪ್ಸಿತಾರ್ಥವು
ಸುಲಭವಾಗಿಯೆ ಶಿವನ ಕೃಪೆಯಿಂ |
ತೊಲಗಿದರು ಮಖಕಂಟಕರು ರಾಕ್ಷಸರು ತಾವೆನುತ ||
ಕೆಲವುದಿನಗಳನಲ್ಲಿ ಸುಖದಿಂ
ಕಳೆಯುತಿರಲಾಮುನಿಯು ಮಾರ್ಗದಿ |
ಕಲಕಲಧ್ವನಿಗೈವ ಜನವನು ಕಂಡನೊಂದುದಿನ ೧

ಅರಿದನವರಿಂ ಮಿಥಿಲೆಯಾಣ್ಮನು
ವರಕುಮಾರಿಗೆ ತಕ್ಕ ವರನನು |
ಮೆರೆವ ಭೂಮಿಪರಲ್ಲಿ ನೋಡಲ್ಕಾಸ್ವಯಂವರವ ||
ವಿರಚಿಸುತ್ತಿಹನದರಿನೆಲ್ಲರು
ನಿರುಕಿಸಲು ತಾವಲ್ಲಿಗೈದು
ತ್ತಿರುವರೆಂಬುದನಾಗ ನಿಶ್ಚೈಸಿದನು ಮನದೊಳಗೆ ೨

ಮೆರೆವಲಕ್ಷ್ಮಿಯೆ ಸೀತೆಯಾಗವ |
ತರಿಸಿಹಳು ಮೋಣಾದಿಪುರುಷನೆ
ಧರಣಿಪತಿಸುತರಾಮನೆನಿಸುತ್ತಿಲ್ಲಿ ತಾಸಿಹನು |
ವರನ ಮೊದಲೇ ವರಿಸಿಹಳು ಮಗ |
ಳರಿಯುನಿದನಾಜನಕನಲ್ಲಿಗೆ
ತೆರಳುವೆನು ನಾಂ ರಾಮಲಕ್ಷ್ಮಣರೊಡನೆನುತ ಬಗೆದು |೩||

ತಳದು ಮಿಥಿಲಾಪಟ್ಟಣದ ದೆಸೆ
ಗೆಳಸಿ ಪೋಗುತ್ತಿರಲು ರಾಮನ
ಪೊಳೆವಲೋಚನಕೊಂದುಶಿಲೆ ಗೋಚರಿಸಿತಿದಿರಿನಲಿ ||
ಗಳಲನಲ್ಲಿಯೆ ನಿಲುತ ಪೆಣ್ಣುವೊ |
ಶಿಳೆಯೊಳದ್ದಿಹಶಿಲೆಯಿದೇನೆನೆ
ತಳುವಮಾಡದೆ ಮುನಿಪನದರ ರಹಸ್ಯವನು ನುಡಿದ |೪||

ಅಲಿಸಾದೊಡೆ ರಾಮ ಪೂರ್ವದಿ
ಮೆಳಿಸಿದ ಗೌತಮಮುನೀಶನು
ಶೀಲವತಿಯೆಂದೆನಿಪಹಲ್ಯೆಯು ವರಿಸಿ ತಾಸಿರಲು ||
ಅಲಲಸೆಯಾಚೆಲುವಿಗಿಂದ್ರನು
ಸೋಲುತಲಿ ಮತಿಗೆಟ್ಟು ಕಪಟದ |
ಲೀಲೆಯಿಂದವಳ ಮಳಸುವ್ರತಕೆಡರನೊದವಿಸಿದ ||೫||

ಮೋಸಕಿವಳೆಡೆಯಾದಳಾದೊಡ
ಮಾಸುಶೀಲತೆ ಕೆಟ್ಟುದೆನುತಲಿ ।
ರೋಸದಿಂದಾಮುನಿಯು ಶಾಪವನಿತ್ತನಿರ್ವರಿಗೆ ॥
ವಾಸವನೆ ನೀನರಿದುಮೆನ್ನವಿ ।
ಳಾಸಿನಿಯೊಳೂಡಗೂಡಿದುದರಿಂ ।
ಹೇಸಿಕೆಗೆ ಪಕ್ಕಾದಷಂಡತೆ ಸಮನಿಸಲಿ ನಿನಗೆ ॥ ೬ ॥

ಎಂದು ಶಪಿಸುತೆ ಸತಿಯೆ ನಿನ್ನಯ ।
ಸಂದಪಾತಿವ್ರತ್ಯವೊಕ್ಕುದು ।
ಇಂದುಮೊದಲದರಿಂದ ಘನಶಿಲೆಯಾಗು ನೀನೆನಲು ॥
ಸುಂದರೀಮಣಿಯುಳುಕಿ ಗತಿಯೇಂ ।
ಮುಂದೆ ತನಗೆನೆ ರಾಮಚಂದ್ರನು ।
ಬಂದು ಮೆಟ್ಟಲು ಮರಳಿ ಬದುಕುವೆಯೆಂದನಾಮುನಿಪ ॥ ೭ ॥

ಅದರಿನಿಂದೀಶಿಲೆಗೆ ನಿನ್ನಯ ।
ಪದಸರೋಜವ ಸೋಂಕಿಸೆಂದೆನೆ ।
ಪದುಳದಿಂ ಶ್ರೀರಾಮನಂಘ್ರಿಯ ನಿಟ್ಟೊಡಾಶಿಲೆಯು ॥
ಪದುಮನಾಥ ಮುರಾರಿ ಜಯಜಯ ।
ಸದಮಲಾತ್ಮ ಬ್ರಹ್ಮ ಜಯಜಯ ।
ಬದುಕಿದೆನು ತಾನೆಂದು ನುತಿಸಿತಹಲ್ಯೆರೂಪಿನಲಿ ॥ ೮ ॥

ರಾಮನತಿವಿಸ್ಮಯಮನಾಂತಿರೆ ।
ಪ್ರೇಮದಿಂ ಪದಕೆರಗಿ ಸತಿಯು ।
ದ್ಧಾಮಮುನಿಪತಿಗಭಿನಮಿಸಿ ತನ್ನಾಶ್ರಮಕೆ ತೆರಳೆ ॥
ರಾಮಲಕ್ಷ್ಮಣರೊಡನೆ ಮುನಿಪನು ।
ಗ್ರಾಮಗಿರಿನದಿಗಳನು ದಾಂಟುತ ।
ಆಮಹೀಪತಿ ಜನಕರಾಜನ ಪೊಳಲ ಸೇರಿದನು ॥೯॥

ಜನಕಭೂಪತಿಯಾ ಸ್ವಯಂವರ ।
ದಿನದೊಳತಿಸಂಭ್ರಮವನಾನು ।
ತ್ತನಿಮಿಷೇಂದ್ರನ ಪುರಕೆ ಮಿಗಿಲೆನಿಸಂತೆ ಮಿಥಿಲೆಯನು ॥
ಮನದಣಿಯೆ ಸಿಂಗರಿಸಿ ನಾನಾ ।
ಜನಕೆ ತಕ್ಕಂದದಲಿ ಪೊಸತಹ ।
ಮನೆಗಳನು ಪರುಠವಿಸಿ ತೋರಣಗಳನು ಕಟ್ಟಿಸುತ ॥೧೦॥

ಹಿಂದೆ ವರುಣನು ನಿಮಿಯ ವಂಶದ ।
ಸಂದಭೂಪತಿದೇವರಾತಂ ।
ಗೆಂದು ಕೊಟ್ಟಹಹರನ ಧನುವನು ತರುವವೋಲ್ಬೆಸಸೆ ॥
ಮಂದರಾದ್ರಿಯ ಪಳಿವ ಬಿಲ್ಲನು ।
ತಂದರಾಳುಗಳಧಿಕಸಾಹಸ ।
ದಿಂದಲಿಳುಹಿದರಾಸ್ವಯಂವರಮಂಟಪದೊಳದನು ॥೧೧॥

ಅರಸನಾಗಳು ಬಂಧುಜನವನು ।
ನೆರಹಿ ಕರೆಸುತೆ ರಾಜತತಿಯನು ।
ಬರಿಸಿ ಮಂತ್ರಿಪುರೋಹಿತರನಾಭೃತ್ಯಜನಸಹಿತ ।
ಮೆರೆವಮದನನ ಪಟ್ಟದಾನೆಯ ।
ಸರಸವಹ ಸಿಂಗರದ ಸೋನೆಯ ।
ವರವಸಂತನ ಮಂತ್ರದೇವಿಯ ಕರೆಯಿರೆಂದೆನಲು ॥೧೨॥

ತ್ವರಿತದಿಂ ಚರರೈದಿ ವಾರ್ತೆಯ ।
ನರುಹೆ ಸಖಿಯರು ಪರಮಸಂಭ್ರಮ ।
ವೆರಸಿ ಸೀತಾದೇವಿಯನು ವಿಧವಿಧದಿ ಸಿಂಗರಿಸಿ ।
ಕರತರುವಸಮಯದಲಿ ನೃಪಸಭೆ ।
ಬೆರಗುವಡೆದಿರುತಿರಲು ಭೂಪತಿ
ವರನ ಕುಳ್ಳಿರಿಸಿದನು ಕೆಲದಲಿ ತನ್ನ ನಂದನೆಯ ॥೧೩॥

ನಿಂದು ಸಭೆಯಲಿ ಜನಕಭೂಪತಿ ।
ಯೆಂದು ಸಾರಿದನಿಕ್ಷಿತೀಶ್ವರ ।
ವೃಂದಮಧ್ಯದಿ ತೋಳ ಬಲುಹಿಂದಾವನೀಧನುವಾ ।
ಇಂದುಪಾಯದೊಳೆತ್ತಿ ಸರಳನು ।
ಸಂಧಿಸುವನಾವೀರನೆನ್ನಯ ।
ನಂದನೆಗೆ ಪತಿಯಪ್ಪನೆನುತಲಿ ಕರಯುಗವ ಮುಗಿದು ॥೧೪॥

ಕೇಳದುದು ನೃಪಸಭೆಯು ಜನಕನ |
ಹೇಳದಾದುರ್ಧರದ ಪಂತವ |
ತಾಳಿದುದು ಮೌನವನು ತಮಗಿದು ಸಾಧ್ಯವೇ ಎನುತ |
ಫಾಳನಯನನ ಚಾಪವಿದು ತಮ |
ಗೇಳುವುದೆ ಬೇರೊಂದುಪಂತವ |
ಹೇಳು ಭೂಪತಿಯೆನಲು ಚಿಂತೆಯನಾಂತನಾಜನಕ ||೧೫||

ಅವರಮಧ್ಯದಿನಾಗಳೆದ್ದನು
ಶಿವಗಿರಿಯನಲುಗಿಸಿದ ಸುಭಟನು |
ಭುವನಕಂಟಕತಿಲಕಲಂಕಾಧೀಶರಾವಣನು |
ತವೆ ಜಯಾಂಗನೆ ಮದ್ಭುಜದೊಳಿರ |
ಲವರಿವರಿಗೀಚಾಪವೊಲಿವುದೆ |
ಅವನಿಸಂಭವೆಯುದಿಸಿಹಳು ತನಗೋಸುಗವೆ ಎನುತ ||೧೬||

ಸಾರಲಿವನಾಧನುವನವನಿಜೆ |
ನಾರಿ ಬೆದರಿದಳಕಟ ಕೆಟ್ಟೆನು |
ಘೋರದಾನವನಾಳುತನಕೀಚಾಪವೇಸರದು |
ಮಾರಮಣ ನೀನಲ್ಲದೆನ್ನ ವಿ |
ಚಾರಿಸುವವಿಭುವಿಲ್ಲ ಭಕ್ತ್ಯೋ |
ದ್ಧಾರ ಸಲಹೈ ತನ್ನನೆಂದಳು ನೆನೆಯುತಚ್ಯುತನ ||೧೭||

ಸುದತಿಯನು ಕಂಡೊಡನೆ ಚಿತ್ತವು ।
ಚದರದಲ್ಲಿಯೆ ನೆಲಸೆ ಖಳಪತಿ ।
ಬೆದಗತನದಿಂದೌಂಕಿ ಧನುವಿಗೆ ಹೆದೆಯನೇರಿಸುವ ।
ಹದನನರಿಯದೆ ಮುಗ್ಗಲದು ತ ।
ನ್ನೆದೆಯಮೇಲಿರದಾಗ ಬೀಳಲು ।
ಮುದವಡಗೆ ಜಾರಿದನು ನೆನೆದನು ಕಪಟವನು ಮನದೆ ॥೧೮॥

ಆಗ ವಿಶ್ವಾಮಿತ್ರಮುನಿಪತಿ ।
ಬಾಗಿಲಲಿ ಬಂದಿರುವನೆನುತಲಿ ।
ಬೇಗದಿಂ ಚರರೈದಿ ಪೇಳಲು ಬಂದೆನಿದೊ ಎನುತ ।
ನೀಗಿ ಚಿಂತೆಯನಿದಿರುಗೊಳುತಲಿ ।
ಯೋಗಿವರ ನಿನ್ನೀಬರವು ಮ ।
ದ್ಭಾಗಧೇಯವೆನುತ್ತ ಪೀಠವನಿತ್ತು ಮನ್ನಿಸಿದ ॥೧೯॥

ಇಂದು ತವಮ್ಮಾಗಮನವೆನಗಾ ।
ನಂದವಿತ್ತುದು ತಮ್ಮಡಿಯ ದೂ
ಳಂದ ಗೇಹವು ಶುದ್ಧವಾದುದೆನುತ್ತಲಾನೃಪತಿ ।
ಸಂದಮುನಿವರನೊಡನೆ ಬಿಡದೈ ।
ತಂದು ಕುಳತಿಹ ರಾಮಲಕ್ಷ್ಮಣ
ರಂದವನು ನೋಡುತ್ತ ಮನದೊಳು ಭಾವಿಸಿದನಾಗ ॥೨೦॥

ಆರ ತನುಜರೊ ಇವರು ಮದನಾ |
ಕಾರರಾಗಿರುತಿಹರು ಮುನಿಪನ |
ಸೇರಿ ಬಂದಿಹರೀಸ್ವಯಂವರಕಾಲದಲಿ ತಾವು ||
ಧೀರರಿವರೊಳಗೊಬ್ಬರಿಗೆ ಸುಕು
ಮಾರಿ ಸೇರಿದೊಡೆನ್ನಪುಣ್ಯವು |
ನಾರಿ ಯೇನಿದಕಿನ್ನು ಪಂತವನೆಸಗಿ ಕೆಡಿಸಿದೆನು ||೭೧||

ಮೀರಿ ನಡೆದನು ತನ್ನ ಪೂಣ್ಕೆಯ |
ಧಾರಿಣೀಪತಿ ಜನಕನೆಂಬೀ |
ದೂರು ಹೊದ್ದದೆ ಮಾಣದೆನ್ನನು ತಪ್ಪಿದೊಡೆ ತಾನು ||
ಈಋಷೀಶ್ವರನಿಂದಿವರ ಕುಲ
ತಾರತಮ್ಯವನರಿವೆನೆಂದುರೆ |
ಬೀರಿ ವಿನಯವನರುಹು ಮುನಿಪತಿ ಕುವರರಿವರಾರು ||೭೨||

ಇವರ ನೋಡಿದ ಮಾತ್ರದಿಂ ಬಗೆ |
ತವಕವಡುತಿಹುದೀಗಳೆನ್ನಯ |
ಕುವರಿ ಸೀತೆಯನಿವರೊಳೊರ್ವಂಗೀಯಬೇಕೆನುತ ||
ಜವಳನುಡಿಗಂಜುವೆನು ಘನಚಾ |
ಪವನು ಪೂಡಿದವಂಗೆ ಮಗಳನು |
ಜವದಿ ಕುಡುವಾ ಭಾಷೆ ತನ್ನದು ಧನುವಸಾಧ್ಯವಲಾ ||೭೩||

ಜನಪನಿಂತೆನೆ ನುಡಿದನಾಮುನಿ
ಮನದೊಳಸ್ನಿದಕೇಕೆ ಚಿಂತಿಪೆ ।
ಯಿನಕುಲೋದ್ಭವದಶರಥೇಂದ್ರನ ಪುತ್ರರಿವರುಕಣಾ
ದನುಜರುಬ್ಬಟೆ ಬಲುಹು ಯಾಗಕೆ ।
ತನುಜರನು ಕಳುಹೆಂದು ಬೇಡಲು
ಜನಪನಟ್ಟಿದನಿವರನೆನ್ನಯ ಮಖವ ರಕ್ಷಿಸಲು ॥ ೭೪ ॥

ಘನಪರಾಕ್ರಮಿಯುಹ ಸುಬಾಹುವ
ಹನನಗೆಯ್ಯುತ ದುಷ್ಟಮಾರೀ ।
ಚನನು ಸೇರಿಸಿ ಕಡಲ ಬಳಿಕುಳಿದವರನುರೆ ಸವರಿ
ಅನುಪಮಮಹಾಮಹಿಮ ರಾಘವ
ನಿನಕುಲದ ಪೆಸರುಳಿಸಿ ಮಖವನು ।
ಮುನಿಗಳೊಪ್ಪಲು ಸಲಹಿ ನೋಡಲ್ಕೀ ಸ್ವಯಂವರವ ॥ ೭೫ ॥

ಬಂದನೀಲಕ್ಷ್ಮಣನೊಡನೆ ಯಿನ ।
ಲಂದು ಹಿಗ್ಗುತ ನೃಪನು ರೂಪಿಂ ।
ಗಿಂದು ಕೂಡಿತು ಕುಲವು ರನ್ನಕೆಚಿನ್ನವೆರೆದಂತೆ
ಮುಂದೆ ಚಾಪವನೆತ್ತಿಯಿವನದ ।
ಹಿಂದೆ ಮತ್ತಾ ನುಜಾತೆಯನು ಪೂ ।
ರ್ಣೇಂದುಮುಖಿಯನು ಸೇರೆ ನಾಂ ಕೃತಕೃತ್ಯನಾಗುವೆನು ॥ ೭೬ ॥

ವೀರರೊಳಗಗ್ಗಳೆಯ ರಾಮನು ।
ಭೂರಿಭಾರದ ಶೈವಧನುವಿದು ।
ವಿಾರಿಹುದು ಶಕ್ತಿಯನು ನೆರೆದೀಭೂಮಿಪಾಲಕರ ॥
ಕ್ರೂರವಿಧಿ ತಾನೇನಗೆಯ್ವುದೊ ।
ತೋರದೇನುಂ ಹೃದಯಕೀಸುಕು ।
ವಾರಿಸೀತೆಯ ಭಾಗ್ಯವೆಂತೋ ಎನುತ ಚಿಂತಿಸಿದ ॥೨೭॥

ಧರಣಿಪಾಲನ ಮನದ ಚಿಂತೆಯ ।
ನರಿದು ಮುನಿಪತಿ ಚಿತ್ರತ ಸಂಶಯ ।
ಶರಧಿಯಲಿ ಸಿಲುಕುತ್ತ ರಾಮನ ಭುಜಬಲೋನ್ನತಿಯ ॥
ಅರಿಯದೀಪರಿ ಗಾಸಿವಡುವನು ।
ಒರೆದೆ ತಾನೀಕ್ಷಣದಿ ತೋರುವೆ ।
ವರಕುಮಾರನ ಪರಿಯನೆಂದಾ ರಾಮನನು ಕರೆದು ॥೨೮॥

ರಾಮ ಬಾರೈ ರವಿಕುಲಾಂಬುಧಿ ।
ಸೋಮಬಾರೈದೈತ್ಯಸಂಕುಲ ।
ಭೀಮಬಾರೈ ಸುಗುಣಮಣಿಮಂಡಿತನೆ ನೀಬಾರೈ ॥
ಈಮಹಾಧನುವಿಲ್ಲಿ ನೆರೆದಿಹ ।
ಭೂಮಿಪಾಲರ ಸೋಲಿಸಿತು ನಿ ।
ಸ್ಸೀಮ ತೋರೈ ಕೈಗುಣವ ನೀನೆಂದು ಮುನಿ ನುಡಿದ ॥೨೯॥

ಆಗಳೆದ್ದನು ರಾಮಚಂದ್ರನು
ಯೋಗಿವರ್ಯನ ಚರಣಕಮಲಕೆ
ಬಾಗಿ ವಂದಿಸಿ ವಿನಯದಿಂದೊಡಗೂಡಿ ಮುನಿವರನೆ
ಸಾಗುವುದೆ ಘನಕಾರ್ಯವೆನ್ನಿಂ
ಬೇಗ ಕೃಪೆಯನು ಬೀರಿ ಗೆಲಿಸೈ
ನೀಂ ಗುರುವಲಾ ಎನುತ ನೋಡಿದನಂದು ಶಿವಧನುವ ॥ ೩೦ ॥

ನೋಡಿ ಪಲತೆರದಿಂದ ಸಲೆಕೊಂ
ಡಾಡಿ ತನ್ಮಹಿಮೆಯನು ಕೈಗಳ
ಜೋಡಿಸುತ ಭಕ್ತಿಯಲಿ ಶಂಕರನಡಿಯ ಜಾನಿಸುತ
ನಾಡಿನರಸರು ನಿನ್ನನೊಲಿಸುವ
ಜಾತನರಿಯದೆ ಭಗ್ನರಾದರು
ರೂಢವಾಗಿಹ ನಿನ್ನ ಕರುಣವ ಬೀರು ನನ್ನೊಳಗೆ ॥ ೩೧ ॥

ವೀರರಗ್ಗದ ಹಮ್ಮುಮುರಿದೀ
ಘೋರಧನುವನು ಗೆಲಿಸುತೆನ್ನನು
ಪಾರುಗಾಣಿಸು ಪುರಹರನೆ ಯೆಂದೆನುತ ಕೈನೀಡಿ
ಭಾರಿಧನುವನು ಪಿಡಿದು ಬಾಗಿಸೆ
ಭೂರಿರವದಿಂ ಮುರಿದು ಬಿದ್ದುದು
ಧಾರಿಣಿಯುಮೇಲಾಗ ಬೆದರಿತು ನಿಖಿಲಜನನಿವಹ ॥ ೩೨ ॥

ಅಲಿದನು ಮುನಿ ಕಾಣಿಯುತರಸನು ।
ತೇಲಿದನು ಹರ್ಷಾಂಬುನಿಧಿಯೊಳು ।
ಮೇಲೆ ಸುರರುಲಿಯುತ್ತ ಕರೆದರು ಪುಷ್ಪವೃಷ್ಟಿಯನು ।
ಲೋಲಲೋಚನೆ ಪರಿಮಳದ ಪೂ
ಮಾಲೆಯನು ಕರದಿಂದ ಪಿಡಿದಾ
ನೀಲಮೇಘಶ್ಯಾಮನಿಗೆ ಧರಿಸಿದಳು ಭೂಜಾತೆ ॥೩೩॥

ಹರುಷವಾಂತುದು ಸಿಖಿಲಜನವುಪ
ಚರಿಸಿ ಜನಕನು ತನ್ನಪುಣ್ಯದಿ
ವರನು ಮಗಳಿಗೆ ರಾಮಚಂದ್ರನು ದೊರೆದನೆಂದೆನುತ ॥
ಪರಮಸಂತೋಷದಲಿ ಮುನಿಪತಿ ।
ವೆರಸಿ ಸುರುಚಿರರಾಮಲಕ್ಷ್ಮಣ ।
ರಿರುವರನು ಕೂಡುತ್ತ ತೆರಳಿದನರಮನೆಗೆ ತಾನು ॥೩೪॥

ಆಗ ನೋಡಿ ವಿವಾಹಕನುಗುಣ
ವಾಗಿರುವ ದಿವಸವನು ತಿಳುಹಿಸೆ ।
ಬೇಗಿ ವಿಶ್ವಾಮಿತ್ರನದಕನುಮತಿಸಲಾ ನೃಪತಿ ।
ಬೇಗಬರೆಸುತ ಲಗ್ನಪತ್ರವ
ನೀಗಳೀ ಲೇಖವನಯೋಧ್ಯೆಗೆ
ಪೋಗಿ ದಶರಥನೃಪತಿಗೀಯೆಂದೊರ್ವ ವಿಪ್ರನನು ॥೩೫॥

ಕರೆದು ನೇಮಿಸಲವನು ಕೊಂಡಾ ।
ದರದಿನಲ್ಲಿಂ ತಳರ್ದಯೋಧ್ಯಾ
ಪುರವ ಸೇರುತ ಕಂಡನಂದರಮನೆಯ ಬಾಗಿಲನು ॥
ಅರುಹಿದನು ತಾಂ ಬಂದಕಜ್ಜವ ।
ಚರರಿಗವರೊಳಪೊಕ್ಕು ಸಭೆಯೊಳು ।
ಮೆರೆವ ದಶರಥನೃಪಗೆ ಬಿನ್ನವಿಸಿದರು ಕಾರ್ಯವನು ॥೩೬॥

ಬರುತಲಿರ್ಪ್ಪರನೇಕರಿಲ್ಲಿಗೆ ।
ತರುತಿಹರು ತರತರದ ಸುದ್ದಿಯ ।
ತರಳರಿರವನು ಕಂಡುಕೇಳಿದ ಜನರ ನಾವರಿಯೆ ॥
ಕರೆದುತರುವೆನು ಬೇಗ ಬೆದರದಿ ।
ವರಸ ನೀನೆಂದಾ ತಪೋನಿಧಿ ।
ತೆರಳಿದನು ತಾನವನ ಸುಳಿವಿಲ್ಲಿನ್ನುಮೇನಾಯ್ತೋ ॥೩೭॥

ರಕ್ಕಸರು ಮಾಯಾವಿಗಳು ಹಸು
ಮಕ್ಕಳಿಂದಾಗುವುದೆ ಬೇಡನೆ
ಕಕ್ಕಸದ ಮಾತಾಡುತವರನು ಬಿಡದೆ ಕರೆದೊಯ್ದ
ಅಕ್ಕಟೇನಾಗಿಹರೊ ಬಾಲರು ।
ದಿಕ್ಕು ತೋರದು ತನಗೆ ಬ್ರಾಹ್ಮಣ
ಸಿಕ್ಕುವನೊ ಕಿವಿಗಮೃತವನು ಕರೆಯೆಂದನಾಭೂಪ ॥೩೮॥

ಬಂದವಿಪ್ರನನರಸ ಮನ್ನಿಸು।
ತಿಂದದೇನತಿಶಯವು ಪೇಳನೆ।
ಮಂದಹಾಸದಿ ಕರದೊಳತ್ತನು ಲಗ್ನಪತ್ರಿಕೆಯ॥
ಚಂದದಿಂದದನೋದಿಕೊಳುತಾ।
ನಂದಬಾಷ್ಪವು ತುಳುಕೆ ಭೂಪತಿ।
ತಂದವಿಪ್ರನಿಗಿತ್ತು ಧನಕನಕಾದಿವಸ್ತುಗಳ ।೩೯।

ಒರೆದೊರೆದು ಲಿಖಿತವನು ಸಭೆಯೊಳ।
ಗಿರುವ ಜನರಿಗೆ ಗುರುವಸಿಷ್ಠನಿ।
ಗರುಹಿ ಮಂತ್ರಿಸುಮಂತ್ರ ಮುಖ್ಯರಿಗದನು ತಿಳುಹಿದನು॥
ನೆರಹಿದನು ನಿಜಬಂಧುಮಿತ್ರರ।
ಸರಕು ಸಂಭಾರವನು ಹವಣಿಸಿ।
ಸರಭಸದಿ ಪೊರಮಟ್ಟು ಸೇರ್ದನು ಮಿಥಿಲೆಯುಪವನವ ॥೪೦॥

ಕೇಳುತೀ ಶುಭವಾರ್ತೆಯನು ಮಿಗೆ।
ತಾಳಿದನು ಹರುಷವನು ಜನಕನು
ಮೇಳವಿಸಿ ಪರಿವಾರವನು ತಾನಲ್ಲಿಗೈತಂದು।
ಕೇಳಿ ಕುಶಲವನಖಿಲರನು ಬರ।
ಹೇಳಿ ನಗರಿಗೆ ನಲವಿನಿಂ ನೃಪ।
ಮೇಳಿ ದಶರಥನೊಡನೆ ತನ್ನರಮನೆಯನೆಯ್ದಿದನು ॥೪೧।

ಬಂದು ವಿನಯದಿ ರಾಮಲಕ್ಷ್ಮಣ ।
ರಂದು ತಂದೆಯ ಚರಣಕೆರಗಲು ।
ನಂದನರ ಕಾಣುತ್ತ ಪುಳಕಿತಗಾತ್ರನಾಗುತಲಿ ।
ಕಂದ ಬಾರೈ ರಾಮ ಸದ್ಗುಣ ।
ಸಿಂದು ಲಕ್ಷ್ಮಣ ಬಾರ ವೇಗನ್ ತರು ।
ಣೇಂದುಸದೃಶರೆ ಬನ್ನಿರೆಂದಪ್ಪಿದನು ಬಾಲಕರ ॥೪೨॥

ಶಿರವನಾಘ್ರಾಣಿಸುತ ನಲವಿಂ ।
ಕರದಿ ಮೈದಡಹುತ್ತ ನಿಧಿ ತಾಂ ।
ದೊರೆತ ನಿರ್ಧನನಂತಮಂದಾನಂದವಶನಾಗಿ ।
ತರಳರೇ ಕ್ರತು ಪೂರ್ತಿಯಾದುದೆ ।
ದುರುಳರಕ್ಕಸ ಕಾಟವಡಗಿತೆ ।
ಹರನ ಕೃಪೆಯಿಂದುಳಿದು ಬಂದಿರೆಎನುತ ಬೆಸಗೊಳಲು ॥೪೩॥

ತಾತ ರಘುಕುಲದಾಣ್ಮರೊಳು ವಿ ।
ಖ್ಯಾತಿಗೊಂಡಿಹ ನಿನ್ನ ಬಸಿರೊಳು ।
ಜಾತರಾಗಿರುತಿರ್ಪ ನಮಗೆ ವಿಪಕ್ಷಭಯಮಿಹುದೆ ।
ಘಾತುಕಾಸುರರುರುಬ ಮುರಿದುಸು ।
ಪೂತಯಾಗವ ಪೂರ್ತಿಗೊಳಿಸು ।
ತ್ತೀ ತಪೋಧನರೊಡನೆ ಬಂದಿಹೆವೆಂದನಾ ರಾಮ ॥೪೪॥

ಅಂದು ದಶರಥಜನಕರಿರ್ವರು ।
ಮೊಂದುಮಣಿಮಯಪೀಠದೊಳು ಬಗೆ ।
ದಂದು ಕುಳ್ಳಿರಲಾ ಶತಾನಂದರ್ಷಿಯೈತರಲು ।
ವಂದನಾಗಳೆ ಗುರುವಸಿಷ್ಠನು ।
ಸಂವಸಿತ್ತಿರುಸಮಯಮೆನುತ ನು ।
ಬಂಧವನು ಮುದದಿಂದ ಹೊಗಳಿದರಾ ಮುನೀಶ್ವರರು ।೪೫॥

ಜನಕಭೂಪನೆ ಸಫಲವಾದುದು ।
ಮನದ ಬಯಕೆಯು ಪುಣ್ಯವಶದಿಂ ।
ದಿನಕುಲೇಂದ್ರನ ಬಿಯಗತನವಿದು ಸತ್ಯವೆನಿಪುದಲಾ ॥
ನಿನಗೆ ಮುಖ್ಯಪುರೋಹಿತನು ನಾ ।
ನೆನಿಸಿಪರಮಕೃತಾರ್ಥನಾದೆನು ।
ಮುನಿವಸಿಷ್ಠರ ಬರವು ನಮಗಾಯ್ತಖಿಳಸಂಪದವು ।೪೬॥

ಎಲೆ ನೃಪತಿ ಕೇಳೆಮ್ಮ ಪುಣ್ಯದ ।
ಬೆಳಸು ತಾನೀ ರಾಘವನು ಮೇ ।
ದಿನಿಯ ಭಾರವ ಕಳೆಯೆ ಬಂದಿಹ ಲೋಕನಾಯಕನು ।
ಕುಲಶಿರೋಮಣಿ ನಮ್ಮ ಸೀತಾ ।
ಲಲನೆಯನು ಕೈಪಿಡಿಯುತೀಮನೆ ।
ಮಳಿಯನಾದುದು ನಿಮ್ಮ ಪಿರಿಯರ ತಪದ ಮಹಿಮೆ ಕಣಾ ॥೪೭॥

ಎನುತ ಜನಕಗೆ ಮುನಿಶತಾನಂ |
ದನು ನಿರೂಪಿಸೆ ವರದಶರಥಾ |
ವನಿಪನೊಡನೆ ವಸಿಷ್ಠನುಸಿರ್ದನು ಜನಕನನ್ವಯವ ||
ಜನಪ ನಿಮಿಯಿಂದಾಯ್ತು ವಂಶವು |
ಜನಿಸಿದಾನೃಪರೆಲ್ಲ ಸತ್ಯವ |
ನಿನಿಸು ಬಿಡದೆಯೆ ರಾಜ್ಯವಾಳದರೆಂದನಾ ಮುನಿಪ ||೩೮||

ಇಂತು ಸಂಭ್ರಮದಿಂದ ದಿನದಾ |
ದ್ಯಂತವನು ಕಳೆಯುತ್ತ ಮರುದಿನ |
ಶಾಂತಿಮೊದಲಾದಖಿಳಮಂಗಳಕಾರ್ಯಗಳ ಗೈಸಿ |
ಅಂತರಾತ್ಮಪ್ರೀತಿಗಾಗಿಯು |
ನಂತಗೋಭೂವಸ್ತ್ರಾದಿದಾನವ |
ನಂತರಿಸದೊಸೆದೀಯುತೆಸೆದನು ಜನಕಭೂಪತಿಯು ||೩೯||

ಬಂದೊದಗಿದುದು ಲಗ್ನವಾವಿದ |
ನಿಂದು ಸಾಧಿಸಬೇಕು ಬರಹೇ |
ಳೆಂದುಮುಖಿಯನು ಪಸೆಯ ಜಗುಲಿಗೆನುತ್ತ ಪೇಳದೊಡೆ |
ಅಂದುಗೆಯ ದನಿ ಘುಲಿರುಘುಲಿರೆನೆ |
ಮಂದಯಾನದಿ ರಾಜಹಂಸಿಯು |
ಚಂದವನು ಜರೆಯುತ್ತ ಬಂದಳು ಸೀತೆ ಮಂಟಪಕೆ ||೪೦||

ಎಡದ ಕರದಿಂ ಸಿರಿಯು ಕುಚ್ಚನು ।
ಪಿಡಿದು ಸೆರಗನು ಬಲದ ಕರದಿಂ ।
ದಡಿಗಡಿಗೆ ಸಾವಗಿಸುತೆಡಬಲಕಿಡದೆ ದಿಟ್ಟಿಯನು
ಅಡಿಯನೀಕ್ಷಿಪಳೆನಲು ಶಿರವನು ।
ಬಿಡದೆ ಬಾಗಿಸಿ ತೂಗುತ್ತೈದುವ
ಬೆಡಗಿನಾನೆಯತೆರದಿ ಬಂದಳು ಸೀತೆಯೊಲವಿನಲಿ ॥೫೧॥

ಈಕೆ ಮದನಪತಾಕೆ ಸೀತೆಯು ।
ನಾಕಜನನುತೆ ಯಾಗಭೂಮಿಯೊ ।
ಳಾಕೆ ದೊರೆತಳು ಜನಕಭೂಪನ ಪೂರ್ವಸುಕೃತದಲಿ
ಜೋಕೆಯಿಂದಿರಿ ಸಿರವ ಬಾಗಿರಿ ।
ಲೋಕನಾಯಕನರಸಿ ಬರುವಳು ।
ಸಾಕು ತೊಲಗಿರೆನುತ್ತಲುಗ್ಗಡಿಸಿದರು ವಂದಿಗಳು ॥೫೨॥

ಬಂದಕುವರಿಯ ನೋಡುತನುನಯ ।
ದಿಂದ ತನ್ನಯ ತೊಡೆಯನೇರಿಸಿ ।
ಮುಂದುಜನಕಾವನಿಪನಾಶ್ರೀರಾಮಚಂದ್ರನಿಗೆ ।
ಇಂದುಪರಿಯಂತೀಕೆಯನು ನಲ ।
ವಿಂದೆ ಸಾಕಿದೆ ನೀಗಳಾಗೋ ।
ವಿಂದಸಹ ನಿನಗೊಪ್ಪಿಸಿದೆನೆಂದೆರೆದ ಧಾರೆಯನು ॥೫೩॥

ಒಂದುಕಡೆ ಜನರುಲಿವಜಯರವ |
ವೊಂದುಕಡೆ ಭೂಸುರರ ಸ್ವಸ್ತಿಯು |
ದೊಂದುಕಡೆ ಭೋರೆಂಬಮಂಗಳವಾದ್ಯದಬ್ಬರಣೆ ||
ಒಂದುಕಡೆಯೊಳು ವೇದಘೋಷವ |
ದೊಂದುಕಡೆ ಮಾಗಧರ ನುತಿರವ |
ವೊಂದುಗೂಡುತ ಶಬ್ದಮಯಮೆನೆ ತೋರಿತಾಸ್ಥಾನ ||೫೭||

ಧರಣಿಪತಿ ಯೂರ್ಮಿಳೆವೆಸರಬಂ |
ಧುರತನೂಜೆಯ ಲಕ್ಷ್ಮಣಂಗಿ |
ತ್ತೆರೆದು ಧಾರೆಯನಂತು ಸೋದರನಹಕುಶಧ್ವಜನಾ ||
ವರತನುಜೆಯರ ಭರತಶತ್ರು |
ಘ್ನರಿಗೆ ಕೊಟ್ಟೆಸಗಿದನು ಮದುವೆಯ |
ಸುರುತರದ ವೈಭವದಿ ಸುರಭೂಸುರರು ನಲಿದಾಡೆ ||೫೮||

ನಾಲ್ಕನೆಯಸಂಧಿ ಸಂಪೂರ್ಣಂ

ಐದನೆಯ ಸಂಧಿ.

ಸೂ ॥ ರಾಮನನುಪಮಬಲನು ಭಾರ್ಗವ ।
ರಾಮಮದವನು ಮುರಿಯೆ ದಶರಥ ।
ಭೂಮಿಪತಿ ಸಲವಿಂದಯೋಧ್ಯಾಪುರವನೈದಿದನು ॥

ಜನಕನನುಮತಿವಡೆದು ದಶರಥ ।
ಜನಪನಲ್ಲಿಂ ಪಯಣಲಗುನದೊ
ಳನುವಿನಿಂ ಪೊರಮಟ್ಟನುರೆ ಸಾಕೇತಪುರಿಗಾಗಿ ॥
ತನುಜರೊಡನೈದುತ್ತಮಿದಿರೊ ।
ಳ್ಮಿನುಗುತಿಹ ಪರಶುವನು ಪಿಡಿದಿ ।
ಪ್ಪನುಪಮದ ಜಮದಗ್ನಿಸುತನನು ಕಂಡನಾಭೂಪ ॥೧॥

ಕಾಣಲೊಡನೆಯೆ ಬೆದರಿ ನಡುಗುತೆ ।
ತ್ರಾಣಗೆಟ್ಟನು ನಿಖಿಲರಾಜ ।
ಪ್ರಾಣಹಾರಕನಿವನ ಕೈಗಳಗೀಗ ಸಿಲುಕಿದೆನೆ ।
ಜಾಣತನವಿವನಲ್ಲಿ ಸಾಗದು ।
ಕೇಣದಿಂ ಮತ್ತುತ್ತರಸಿಕ್ಕದೆ ।
ಮಾಣಸಿದಕೇಗೈವೆನೆಂದೊಳಗಳಲಿದನು ನೃಪತಿ ॥೨॥

ಕಂಡನಿವನನು ಮುನಿಪನಂತ್ಯದ ।
ಖಂಡಪರಶುವೊ ಎನಲು ನೇತ್ರದಿ ।
ಕೆಂಡವುಗುಳುತ ನಿಂದು ನುಡಿಸಿದನಂದು ದಶರಥನ ॥
ಕಂಡಕಂಡಾ ಕ್ಷತ್ರಿಯರುಗಳ ।
ದಿಂಡುದರಿವಭುಜೋರುಬಲದಿಂ ।
ಚಂಡನೆನಿಪೀಪರಶುರಾಮಂಗಿಂದು ಸಿಕ್ಕಿದೆಯಾ ॥ ೩ ॥

ಹಿಂದೆ ರಾಜನ್ಯರನು ಸವರು ।
ತ್ತೊಂದುದಿನ ನಿನ್ನರಮನೆಗೆ ಬರ
ಲಂದು ತಲೆಯನು ಮರಸಿಕೊಂಡೈ ರಾಣಿವಾಸದಲಿ ॥
ಇಂದುಪಾಯವನೇನಮಾಡುವೆ ।
ಬಂದು ಬಿಡಿಸುವರಾರು ನಿನ್ನನು
ಹಂದೆ ನೋಡೀಪರಶುಮಹಿಮೆಯನಿನ್ನು ತೋರಿಸುವೆ ॥ ೪ ॥

ತರಳರಿವರನು ಕೂಡಿ ಜನಕನ ।
ಪುರವನೈದಿ ಮದೀಯಗುರುಶಂ ।
ಕರನಧನುವನು ಮುರಿಯಿಸಿದೆ ನಾನೆಂಬಗರ್ವದಲಿ ॥
ಸರಿಯೆನಿಪ್ಪವರಾರುಮೆನಗೀ
ಧರಣಿಯೊಳಗಿಲ್ಲೆಂದು ಬಗೆದೆಯ ।
ಪರಶುವಿಲ್ಲವೆ ಜಾಮದಗ್ನ್ಯನ ಕರದಿ ನೀನರಿಯಾ ॥ ೫ ॥

ಅರಸುಮಕ್ಕಳ ಸಿರವನರಿಯುತ
ಪರಿವರಕುತದಿ ಪಿತರರಿಗೆ ನೆರೆ |
ತರಪಣಂಗೈದುರುಕಪಾಲದಿ ನಾಕಮಾರ್ಗಕ್ಕೆ
ಮೆರೆವ ಸೋಪಾನವನು ರಚಿಸಿದ
ಪರಶುರಾಮನ ಕರಕೆ ಸಿಲುಕಿರ
ಲಿರವು ನಿಮಗಿನ್ನೆಂತು ಋಷಿಪುನ: ಕೆಟ್ಟಿರಕಟೆಂದ ||೬||

ಕೇಳುತಿರ್ದನು ಮುನಿಯುವಚನವ |
ನೇಳಸದೆ ಗಂಭೀರತನದಿಂ
ಪೇಳ ನೋಡುವೆ ಬುದ್ಧಿವಾದವನೆನುತ ರಾಘವನು ||
ಕೀಳುನುಡಿಗಳನೇಕೆ ನುಡಿವಿರಿ |
ಜಾಳಿಯೇನಿದು ವಿಪ್ರಜಾತಿಗೆ |
ಮೇಲೆ ವೃದ್ಧರು ಪೇಳಲಮ್ಮೆನು ಬಾಲನಾನೆಂದ ||೭||

ಮುನಿಯೆ ಬೆಸಸುವುದೆನಗೆ ತಪಿಸ್ಮ |
ಘನಪದಾಂಬುಜವಿಲ್ಲಿಗೈತಂ |
ದನುವಸಿನಿಸುಂ ಮರೆಯಮಾಡದೆ ಶಾಂತಿಯನು ವಹಿಸಿ ||
ಇನಕುಲೋದ್ಭವರರ್ಥಿವಾಂಛೆಯ |
ನೆತುಘನವಾದೊಡೆಯು ಸಲಿಸದೆ |
ಜೆನುಗರೆಂಬೀನುಡಿಗೆ ಲೋಪವೆ ನಿಮ್ಮ ವಿಷಯದಲಿ ||೮||

ಮನದಭೀಷ್ಟವ ಪಡೆದು ತೆರಳದೆ ।
ಜನಕನನು ಜಗದೇಕವೀರನ ।
ಮನದ ಮೈಲಿಗೆಯಿಂದ ನಿಂದಿಪುದುಚಿತವೇ ನಿಮಗೆ ।
ದಿನಪವಂಶದ ಸಾರ್ವಭೌಮರು ।
ಬಿಸುಗುಪಾರ್ವನಗೊರ್ವನಿದಿರಿಸೆ ।
ಘನಪರಾಕ್ರಮಿಯೆನುತಲವನೊಡನೆಂತು ಸೆಣಸುವರು ॥೯॥

ಪೋಗಲೊಳ್ಳಿತು ನೋಳ್ಪವೆನುತಲಿ ।
ತೂಗಿ ಬಿಡಲೊಂದಂಬನದು ಬಿರಿ ।
ಸಾಗಿ ನಿಮ್ಮೊಳು ತಪ್ಪನೆಸಗಲು ಕೀರ್ತಿಯೇನೆಮಗೆ ।
ತಾಗುವುದು ತಾ ಬ್ರಹ್ಮಹತ್ಯೆಯು ।
ರೋಗವೆಮ್ಮನು ಬಿಡದೆ ನೆಲದೆ ೞಳು ।
ಕೂಗಿಗಾಕರವಹೆವು ದುಷ್ಟರು ರವಿಕುಲಜರೆಂಬ ॥೧೦॥

ಇದರ ಮರ್ಮವ ನರಿಯದಕಟಾ ।
ಸದಮಲಾನ್ವಯತಿಲಕನನು ಪೊ ।
ಳ್ಳೆದೆಯುನೆನುತಿಂದಣಕವಾಡಿದನಿಮ್ಮ ನಾಲಗೆಯಾ ।
ತುದಿಯುನರಿಯಲು ಮನವು ತವಕಿಪು ।
ದಿದನು ಮಾಣ್ಮಾಸ್ ಬ್ರಹ್ಮಹತ್ಯಾ ।
ಸ್ಪದವು ಲೇಸಲ್ಲೆಂದು ತಡೆವುದು ಶಾಸ್ತ್ರದೊಕ್ಕಣೆಯು ॥೧೧॥

ಅದರಿನಿಲ್ಲಿರದೀಗ ಬೇಗನೆ ।
ಚದರಿ ಪೋಗೆಂದೆನಲು ಭಾರ್ಗವ ।
ನುದುರಿಸುತ ಕಿಡಿಗಳನು ನೇತ್ರದೊಳಂತು ಪೇಳಿದನು ॥
ಸದರವಾದನೆ ಬಾಲ ನಿನಗಾ ।
ವಿಧಿಯನಂಜಿಪ ಪರಶುರಾಮನು ।
ಎದೆಯ ಮುಟ್ಟಾನಿಮ್ಮ ತಂದೆಯದೆಂತಿಹುದು ನೋಡಾ ॥೧೨॥

ಮಂಜರನ ಮರಿಗಕಟ ಸರಸವೆ ।
ಕುಂಜರೇಂದ್ರನೊಳಾಡಲೇಂ ಮೃ ।
ತ್ಯುಂಜಯನ ಶಿಷ್ಯನಿಗೆ ತನಗೆಲೆ ಸಾಟಿಯೇ ನೀನು ॥
ನಂಜನುಂಬರೆ ಪಸಿವಿಗರಿತವ ।
ರಂಜದಬಲಾವಧೆಗೆ ತಾಟಕಿ ।
ಯಂ ಜಯಿಸಿದಬ್ಬರದ ಕೊಬ್ಬಿಂದುಬ್ಬಿನುಡಿಯುವೆಯ ॥೧೩॥

ಪರೆಯುತೆರದಿಂದೊಳಗೆ ಪೊಳ್ಳಹ ।
ಹರನ ಧನುವನು ಮುರಿದೆನೆಂಬಾ ।
ಗರುವವಿಷಮೆಡೆಗೊಂಡು ಜರಚುವೆ ಯೆಮ್ಮೊಳಂತಕಟಾ ॥
ತರಣಿವಂಶಜನೆಂದು ಬೆರೆತಿಹೆ ।
ಧರಣಿಯಮರರನಣಕವಾಡುವೆ ।
ವರವಸಿಷ್ಠನ ವರ್ಣವಾವುದು ಗುರುವಲ್ಲೆ ನಿಮಗೆ ॥೧೪॥

ಎನುತ ನುಡಿಯಲು ಪರಶುರಾಮನು ।
ಇನಕುಲಜಸೀಮಾತನೆಂದನು ।
ಮುನಿಯೆ ನಿಮಗೇಕವರಗೊಡವೆಯು ದೈವವವರೆಮಗೆ ।
ತನುಮನಂಗಳೊಳೆಮ್ಮ ಕುಶಲವ ।
ನನುದಿನದಿ ಪ್ರಾರ್ಥಿಸುತ ಬೊಮ್ಮನ ।
ಮನದೊಳೆಡವಿಡದಿಹರ ಪೂಜಿಪ್ಪುದೆಮ್ಮ ಕುಲಧರ್ಮ ॥೧೫॥

ಪದುಳಮಿರದನವರತವಾನೇ ।
ಚದುರನಾನೇ ಶ್ರೇಷ್ಠನೆಂಬುವ ।
ಮದದಿ ನಿಜಕುಲಜಾತಿಧರ್ಮವ ಬಿಸುಟು ದೂರದಲಿ ॥
ಬುಧರ ಚರಿಯವೆ ಯಿಲ್ಲದವರನು ।
ಸದೆದು ಬುದ್ಧಿಯನೊರೆವುದೆಮ್ಮಯ ।
ಸದಮಲಾನ್ವಯ ಧರ್ಮವಾವಿದನುಳಿಯಲೆಂತಹುದು ॥೧೬॥

ಶಾಪಕೀಡಾಗುತ್ತ ವನದಲಿ ।
ತಾಪಸರನುರೆ ವಧಿಸುತಿರ್ದಾ ।
ಪಾಪಿ ತಾಟಕಿಯೆಂಬದನುಜೆಯನಂತು ಮಡಿಪಿದೆನು ॥
ಚಾಪಲದಿ ನಿನ್ನಂತೆ ಮಾತೆಯ ।
ನಾಪರಿಮಿಸುರೆ ಮುದುಪರನು ಕಡು ।
ಗೋಪದಿಂ ಪಸುಳೆಗಳನಾನೇಂ ಕೊಂದಿಹೆನೆ ಮುನಿಯೆ ॥೧೭॥

ಕಡುಗಿಡುಕತನದಿಂದೆ ಧರ್ಮ |
ಕ್ಕೆಡರನೆಸಗುವ ಖಳರ ತರಿವುದು |
ಪ್ರೌಢವಿಯಾಣ್ಮರ ಕರದ ಕಂಕಣದತುಳಮರ್ಮವಿದು ||
ಪಿಡಿದವಾತ್ರದೆ ಪರಶುವನು ನೀಂ |
ನಡೆಸಬಲ್ಲೆಯ ಕ್ಷಾತ್ರಧರ್ಮವ !
ಬಡಿಗೆಗಡಿಯುವ ಕೊಡಲಿಯಾದುದು ಸೇರಿ ನಿನ್ನನದು ||೧೮||

ಬಳ್ಳಿತಾಗಲಿ ಹರನ ಧನುವದು |
ಜಳ್ಳು ಮುರಿದೆನು ಹೋಗಲದು ಬಲ |
ವುಳ್ಳಪಂತವನೊಂದನೊಡ್ಡುತಲೆನ್ನಪರಿಕಿಸೆನೆ ||
ಬಲ್ಲಿದನು ನೀನಾದೊಡೀಗೀ |
ಬಿಲ್ಲಿಗೇರಿಸಿ ಹೆದೆಯನಂಬನು |
ಬುಲ್ಲವಿಸಿ ಪೂಡೆನುತ ವೈಷ್ಣವಚಾಪವನು ನೀಡೆ ||೧೯||

ಲೀಲೆಯಿಂದದನಾಂತು ಕರದೊಳು |
ಮೇಲೆ ಸೇರಿಸಿ ಹೆದೆಯ ಹೂಡುತೆ
ಕೋಲನೊರೆದನು ತೋರು ಭಾರ್ಗವ ಗುರಿಯನಿದಕೆನುತ ||
ಬೀಳುಕೊಂಡುದು ಮುನಿಯ ಧೈರ್ಯವು |
ತಾಳಿದನು ವಿಸ್ಮಯವ ಕಂಡನು |
ನೀಲಮೇಘಶ್ಯಾಮನವತಾರವನು ಬಾಲನಲಿ ||೨೦||

ಈತ ಸಾಕ್ಷಾತ್ಪರಮಪುರುಷನು ||
ಭೂತಳದಿನರನಾಗಿ ದನುಜ |
ವ್ರಾತವನು ನಿಶ್ಶೇಷಗೈಯಲು ರಾಮನಾಮದಲಿ ||
ಪೂತವಾಗಿಹ ರಘುಕುಲದಿ ವಿ |
ಖ್ಯಾತರಾಮಾಯಣವ ಬೆಳಸಲು |
ಜಾತನಾಗೆಸೆಯುವನು ನಮಗಿನ್ನಾಯ್ತು ಪರಿಣಾಮ ||೧೮||

ಇಂತು ಚಿಂತಿಸಿ ಮನದೆ ಮುನಿಪತಿ |
ಯಂತರಾತ್ಮನನೊಲಿದು ನೋಡುತ |
ನಂತಹರ್ಷಿತನಾಗಿ ನುಡಿದನು ದೇವ ಚಿತ್ತೈಸು ||
ಶಾಂತವಾದುದು ಕೋಪಶಿಖಿ ತ |
ನ್ನಂತರಂಗದೊಳುರುವಿರಕ್ತಿಯು |
ದೆಂತೊ ಪೆರ್ಚಿತು ನಿನ್ನದರ್ಶನಮಾತ್ರದಿಂದೆನಗೆ ||೧೯||

ಅದರಿನಿನ್ನನಗಾಜ್ಞೆಯಾದೊಡೆ |
ಬದರಿಕಾಶ್ರಮದತ್ತ ತೆರಳುತ |
ಸದಮಲಾತ್ಮಧ್ಯಾನದಲಿ ಕಾಲವನು ಕಳೆಯುವೆನು ||
ಹೆದೆಯೊಳಳವಡಿಸಿರ್ಪ ಬಾಣದಿ |
ನೊದೆದು ಸಗ್ಗದ ಮೆಟ್ಟಲನು ಕಳೆ |
ಮುದದಿ ನೀನೆಂದೆನುತ ಲಾಶೀರ್ವದಿಸಿ ಪೋಮಟ್ಟ ||೨೦||

ಉಬ್ಬಿದನು ದಶರಥನು ಮಗನನು ।
ತಬ್ಬಿ ಮುಂಡಾಡಿದನು ಲೋಕದಿ ।
ಹಬ್ಬುವಾದುದು ಕಂದ ಬಾಹುಜಕುಲಕೆ ನಿನ್ನಿಂದ ॥
ಸಬ್ಬರೀ ಜಮದಗ್ನಿಸುತನಿಂ ।
ಮಬ್ಬು ಮುಸುಕಿದತೆರದೊಳಿರ್ದ್ದರು ।
ದಬ್ಬುತವನನು ಸಲಹಿದೈ ವಸುಧಾಧಿಪತಿಗಳನು ॥ ೨೪॥

ಪೊಗಳುತಿಂತವನಿಪನು ತನಯನ ।
ನೊಗುಮಿಗೆಯ ಹರ್ಷದಿನಯೋಧ್ಯಾ ।
ನಗರಿಯನು ಸೇರಿದನು ಕಂಡುದು ಬಂದ ನಿಖಿಲಜನ ॥
ಮುಗಿದು ಕರಗಳ ಶಿರವಬಾಗಿಸಿ ।
ರಘುವರನ ಚರಿತವನು ಕೇಳುತ ।
ಜಗೆಯೊಳಾನಂದಿಸುತಮಿರ್ದ್ದರು ಜಗೆಯದಿತರವನು ॥ ೨೫॥

ಪರಿಲಸಿತಕರ್ಣಾಟರಾಜ್ಯದ |
ಸಿರಿಗೊಡೆಯನಹ ಕೃಷ್ಣಭೂಪನ |
ಚರಣಸೇವಕನೆನಿಪ ಚಿಕಲಿಂಗಾಖ್ಯಪಾರ್ಥಿವನು ||
ವಿರಚಿಸಿದನೀ ಬಾಲಕಾಂಡವ |
ನಿರದೆ ಕನ್ನಡ ಷಟ್ಪದಿಗಳಿಂ |
ಧರೆಯೊಳಾರಾಜಿಸುಗೆ ಸುಜನರಿಗೊಲವನೀಯುತಲಿ ||೨೬||

ಕರ್ಣಾಟಕ ರಾಮಾಯಣಸಂಗ್ರಹ

ಬಾಲಕಾಂಡಂ ಸಮಾಪ್ತಂ